

ಕಾಂಗ್ರೆಸ್ (ಐ)ಗೆ ಮತ್ತೊಮ್ಮೆ ಶೋಚನೀಯ ಸೋಲು

ತಮಿಳುನಾಡು ಜನತೆಗೆ ಪಾಲಿಟ್‌ಬ್ಯೂರೋ ಅಭಿನಂದನೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-11 ಸಂಚಿಕೆ-5

29 ಜನವರಿ 1989

ರೂ. 1-00

ಒಳಪುಟಗಳಲ್ಲಿ

ಮುಂದಿನ ಸಂಚಿಕೆಗಳಲ್ಲಿ

ಪ್ಯಾಲೆಸ್ಟೈನ್ ಹೋರಾಟ

ಮಹಾಧಿವೇಶನಗಳ ಅವಲೋಕನ

ಭಾರತದಲ್ಲಿ ಸಾರ್ವಜನಿಕ ವಲಯ

ತಮಿಳುನಾಡಿನ ಜನತೆ ಡಿ.ಎಂ.ಕೆ ಹಾಗೂ ಅದರ ಮಿತ್ರ ಪಕ್ಷಗಳಿಗೆ ಭಾರಿ ಬಹುಮತ ನೀಡಿ ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಹೊರಗಿಡುವ ತಮ್ಮ ಪರಂಪರೆಯನ್ನು ಕಾದುಕೊಂಡಿದ್ದಾರೆ. ಇಷ್ಟೇ ಅಲ್ಲ 22 ವರ್ಷಗಳ ನಂತರ ಮತ್ತೆ ತಾನೇ ಅಥವಾ ಎ.ಐ.ಎ.ಡಿ.ಎಂ.ಕೆ.ಯ ವಿವಿಧ ಬಣಗಳ ಜೊತೆಗೂಡಿಯಾದರೂ ತಮಿಳುನಾಡಿನಲ್ಲಿ ಅಧಿಕಾರ ಪಡೆಯುವ ರಾಜೀವಗಾಂಧಿಯ ಪಕ್ಷ ಕಳೆದ ಕೆಲವು ತಿಂಗಳಿಂದ ಹೆಣೆಯುತ್ತಿದ್ದ ಕನಸನ್ನು ನುಚ್ಚುನೂರು ಮಾಡಿದ್ದಾರೆ. ಪ್ರಧಾನಮಂತ್ರಿಗಳು ಪ್ರತಿವಾರವೆಂಬಂತೆ ತಮಿಳುನಾಡಿನ ಊರೂರುಗಳಲ್ಲಿ ಹಾರಾಡಿದರೂ ಎಲೆಕ್ಟ್ರಾನಿಕ್ ಸಲಕರಣೆಗಳ ಮೂಲಕ 21ನೇ ಶತಮಾನದ ಅಬ್ಬರದ ಪ್ರಚಾರದಿಂದ ಮತದಾರರನ್ನು ಆಕರ್ಷಿಸಲು ಸರ್ವ ಪ್ರಯತ್ನ ನಡೆಸಿದರೂ ಬಹುಮತದ ಭರವಸೆ ಇಟ್ಟುಕೊಂಡಿದ್ದ ಅವರ ಪಕ್ಷ ತಾನು ಹಿಂದಿನ ಚುನಾವಣೆಯಲ್ಲಿ ಗಳಿಸಿದ ಅರ್ಧದಷ್ಟು ಸ್ಥಾನ ಗಳಿಸುವಲ್ಲಿ ವಿಫಲವಾಗಿ 3ನೇ ಸ್ಥಾನಕ್ಕಿಳಿದಿದೆ. ➧ ಪುಟ 8ಕ್ಕೆ

ಕಾಮ್ರೇಡ್. ಶಂಕರ್‌ದಯಾಲ್ ತಿವಾರಿ

ಸಿ.ಪಿ.ಐ.(ಎಂ)ನ ಕರ್ನಾಟಕ ರಾಜ್ಯ ಸೆಕ್ರೆಟಾರಿಯೆಟ್ ಪರವಾಗಿ ಕಾ|| ಸಿ. ನಂಜುಂಡಪ್ಪನವರು ಕಾ|| ಶಂಕರ್ ದಯಾಲ್ ತಿವಾರಿಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ ಈ ಕೆಳಗಿನ. ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ-

"ಉತ್ತರಪ್ರದೇಶದ. ಕಮ್ಯೂನಿಸ್ಟ್ ಆಂದೋಲನದ ಹಿರಿಯ ನೇತಾರ ಹಾಗೂ ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಸದಸ್ಯ . ಕಾ|| ಶಂಕರ್ ದಯಾಲ್ ತಿವಾರಿಯವರ ಆಕಸ್ಮಿಕ ನಿಧನದ ಸುದ್ದಿ ಕೇಳಿ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೆಟ್‌ಗೆ ಆಘಾತವಾಗಿದೆ. ಉತ್ತರ ಪ್ರದೇಶದ ಸಿ.ಪಿ.ಐ.(ಎಂ) ಸದಸ್ಯರಿಗೆ ಮತ್ತು ಶೋಕ ಸಂತಪ್ತ ಕುಟುಂಬದ ಸದಸ್ಯರಿಗೆ ನಮ್ಮ ಸಂತಾಪ ಸೂಚಿಸುತ್ತೇವೆ"

ಕಾ|| ತಿವಾರಿ ಜನವರಿ 18ರಂದು ಲಕ್ನೌನಲ್ಲಿ ನಿಧನರಾದರು. ಅವರಿಗೆ 68ವರ್ಷ ವಯಸ್ಸಾಗಿತ್ತು. 1940ರಲ್ಲಿ ವಿದ್ಯಾರ್ಥಿ ಆಂದೋಲನದ ಮೂಲಕ ಪಕ್ಷವನ್ನು ಪ್ರವೇಶಿಸಿದ ಕಾ|| ತಿವಾರಿ ಅಖಿಲಭಾರತ ಕಿಸಾನ್ ಸಭಾದ ಮುಖಂಡರೂ ಆಗಿದ್ದರು.

ಉತ್ತರ ಪ್ರದೇಶದಲ್ಲಿ ಕಮ್ಯೂನಿಸ್ಟ್ ಆಂದೋಲನ ಕಟ್ಟಿ ಬೆಳೆಸುವಲ್ಲಿ ಅಪಾರ ತ್ಯಾಗ ಮಾಡಿರುವ ತಿವಾರಿಯವರು ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ಸದಸ್ಯರಾಗಿ ದ್ದರು. ಸಿ.ಪಿ.ಐ.(ಎಂ)ನ ಏಳನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆ ಗೊಂಡರು. ಐದೂವರೆ ವರ್ಷ ಭೂಗತ ಜೀವನದ ಅನುಭವ ಪಡೆದಿರುವ ಕಾ|| ತಿವಾರಿ 1967ರಿಂದ 1988ರವರೆಗೆ ಉತ್ತರ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಯಾಗಿದ್ದರು.

ಉತ್ತಮ ಸಾಹಿತಿಗಳೂ ಆಗಿದ್ದ ಕಾಂ|| ಶಂಕರ್‌ದಯಾಲ್‌ತಿವಾರಿ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ವಿಚಾರ ಧಾರೆಯನ್ನು ಪ್ರತಿಬಿಂಬಿಸುವ, ಉತ್ತರಪ್ರದೇಶದ ರಾಜಕೀಯ ಪರಿಸ್ಥಿತಿ ಕುರಿತಾದ ಹಲವು ಪುಸ್ತಕಗಳನ್ನು ಬರೆದಿದ್ದರು.

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹಾಗೂ ಎ.ಐ.ಕೆ.ಎಸ್. ಇವರ ನಿಧನಕ್ಕೆ ಆತೀವ ಶೋಕ ವ್ಯಕ್ತಪಡಿಸಿವೆ.

ಜಾತೀಯಮತೀಯ ಶಕ್ತಿಗಳ ವಿರುದ್ಧ ಎಚ್ಚರವಾಗಿರಬೇಕು

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಸಭೆ ಜನವರಿ 23, 24, 25 ರವರೆವಿಗೆ ಬೆಂಗಳೂರಿನಲ್ಲಿ ಕಾ|| ಎನ್.ಕೆ.ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿದೆ.

ತಮಿಳುನಾಡು ಜನತೆಗೆ ಅಭಿನಂದನೆ

ಇತ್ತೀಚೆಗೆ ನಡೆದ ತಮಿಳುನಾಡು ಚುನಾವಣೆಯಲ್ಲಿ ಕಾಂಗ್ರೆಸ್(ಐ) ಪಕ್ಷವನ್ನು ಸೋಲಿಸಿ ಡಿ.ಎಂ.ಕೆ. ರಂಗವನ್ನು ಅತ್ಯಂತ ಭಾರಿ ಬಹುಮತದಿಂದ ಅಧಿಕಾರಕ್ಕೆ ತಂದಿರುವ ತಮಿಳನಾಡು ಜನತೆಯನ್ನು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಅಭಿನಂದಿಸಿತು.

ಚಿಂಚೋಳಿ ಘಟನೆ ಕುರಿತು

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ಜನವರಿ 17 ಮತ್ತು 18ರಂದು ಹರಿಜನರ ಮೇಲೆ ಅಮಾನುಷ ದಬ್ಬಾಳಿಕೆ ನಡೆದು 74 ಮನೆಗಳನ್ನು ಸೀಮೆಎಣ್ಣೆ ಸುರಿದು ಸುಡಲಾಗಿದೆ. ಮಹಿಳೆ ಮಕ್ಕಳ ಮೇಲೂ ಅನ್ಯಾಯವೆಸಗಿರುವ ಈ ಅಮಾನುಷ ಕೃತ್ಯವನ್ನು ಪಕ್ಷ ಬಲವಾಗಿ ಖಂಡಿಸುತ್ತದೆ. ಜನವರಿ 10ರಂದು ಹೆಡಗೆವಾರ್ ಜನ್ಮ ಶತಾಬ್ಧಿಯ ಅಂಗವಾಗಿ ಆರ್.ಎಸ್.ಎಸ್.ನವರು ಮೆರವಣಿಗೆ ತೆಗೆದ ನಂತರ ಊರಲ್ಲಿ ವಾತಾವರಣ ಕೆಟ್ಟು ದಲಿತ ಯುವಕರ ಮೇಲೆ ಅತ್ಯಾಚಾರ ನಡೆದ ನಂತರ ಈ ರೀತಿಯ ದಬ್ಬಾಳಿಕೆ ನಡೆದಿದೆ. ಇತ್ತೀಚಿಗಿನ ದಿನಗಳಲ್ಲಿ ಜಾತೀಯ-ಮತೀಯ ಶಕ್ತಿಗಳ ಚಟುವಟಿಕೆ ರಾಜ್ಯಾದ್ಯಂತ ವಿಸ್ತರಿಸುತ್ತಿರುವುದು

➧ ಪುಟ 8ಕ್ಕೆ

ಕರ್ನಾಟಕ ರಾಜ್ಯ ಸಾರ್ವಜನಿಕ ವಲಯದ ಕಾರ್ಮಿಕರ ಸಮಾವೇಶ

ಸರ್ಕಾರದ ವಿಳಂಬ ನೀತಿಯ ಖಂಡನೆ

ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಹಿಂದಿನ ವೇತನ ಒಪ್ಪಂದಗಳ ಅವಧಿ ಮುಗಿದು, ವೇತನ ಪರಿಷ್ಕರಣದ ಮಾತುಕತೆಗಳು ಆರಂಭವಾಗಿ ಎರಡು ವರ್ಷಗಳಿಗೂ ಹೆಚ್ಚು ಸಮಯ ಸಂದಿದ್ದರೂ ಇನ್ನೂ ಕಾರ್ಮಿಕರ ಬೇಡಿಕೆಗಳು ಇತ್ಯರ್ಥವಾಗದೇ ಇರುವ ಬಗ್ಗೆ ಕರ್ನಾಟಕದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ತಮ್ಮ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಸರ್ಕಾರದ ವಿಳಂಬ ತಂತ್ರಗಳನ್ನು ಅವರು ಖಂಡಿಸಿದ್ದಾರೆ.

ಸಾರ್ವಜನಿಕ ವಲಯದ ಕಾರ್ಮಿಕರ ವೇತನ ಪರಿಷ್ಕರಣದ ಪ್ರಶ್ನೆಯನ್ನು ಶೀಘ್ರವಾಗಿ ಇತ್ಯರ್ಥ ಮಾಡಿಸಲು ಒತ್ತಾಯಿಸುವ ಒಂದು ವಾರದ ರಾಷ್ಟ್ರವ್ಯಾಪಿ ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನಲ್ಲಿ ಎನ್.ಜಿ.ಓ. ಸಭಾಂಗಣದಲ್ಲಿ ಜನವರಿ 20ರಂದು ನಡೆದ ಒಂದು ಸಮಾವೇಶದಲ್ಲಿ ಈ ಅಭಿಪ್ರಾಯಗಳು ವ್ಯಕ್ತವಾದವು. ಬಿ.ಇ.ಎಲ್., ಐ.ಟಿ.ಐ., ಹೆಚ್.ಎ.ಎಲ್. ಬಿ.ಹೆಚ್.ಇ.ಎಲ್., ಬಿ.ಇ.ಎಂ.ಎಲ್., ವಿ.ಐ.ಎಸ್.ಎಲ್., ಐ.ಟಿ.ಡಿ.ಸಿ., ಎಲ್.ಐ.ಸಿ. ಹಾಗೂ ಇತರ ಸಾರ್ವಜನಿಕ ವಲಯದ ಸಂಸ್ಥೆಗಳ ಒಟ್ಟು 150 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಸಿ.ಐ.ಟಿ.ಯು. ಮುಖಂಡ ಹಾಗೂ ದುರ್ಗಾಪುರ ಉಕ್ಕು ಕಾರ್ಮಿಕರ ಮುಖಂಡರು ಕಾಂ|| ಜೀವನ್ ರಾಯ್ ಸಮಾವೇಶವನ್ನು ಉದ್ಘಾಟಿಸಿದರು.

ಸಾರ್ವಜನಿಕ ವಲಯದಲ್ಲಿ ವೇತನ ಪರಿಷ್ಕರಣ ಮಾತುಕತೆಗಳು ನಡೆಯುತ್ತಿರುವ ರೀತಿಯನ್ನು ವಿವರಿಸಿದ ಕಾ|| ಜೀವನ್‌ರಾಯ್ ಮಾನ್ಯತೆ ಹೊಂದಿರುವ ಮತ್ತು ಹೊಂದಿರದ ಸಂಘಗಳಿಂದು ಕಾರ್ಮಿಕ ವರ್ಗವನ್ನು ವಿಭಜಿಸಲು ಸರ್ಕಾರಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು. "ಬಿ.ಇ.ಎಲ್.ನಲ್ಲಿ ಮಾನ್ಯತೆ ಪಡೆದ ಕಾರ್ಮಿಕ ಸಂಘಕ್ಕೆ 47% ಮತ ದೊರೆತಿದ್ದರೆ ಮಾನ್ಯತೆ ಪಡೆದಿರದ ನಮ್ಮ ಸಂಘಕ್ಕೆ 45 % ಮತ ದೊರೆತಿತ್ತು. ಈ ರೀತಿ ಕಾರ್ಮಿಕರ ನಡುವೆ ಅನೈಕ್ಯತೆ ತರುವಲ್ಲಿ ಸರ್ಕಾರ ಯಶಸ್ವಿಯಾಗಿದೆ" ಎಂದು ಅವರು ಉದಾಹರಣೆ ನೀಡಿದರು. ಬಿ.ಪಿ.ಐ. ಆದೇಶದ ಮೇರೆಗೆ ಆಡಳಿತ ವರ್ಗಗಳು ಸಹಿ ಹಾಕಿದ ನಂತರದ ದಿನಾಂಕದಿಂದಲಷ್ಟೇ ಅನ್ವಯವಾಗುವ ಒಪ್ಪಂದ ಹೇರಲು ಪ್ರಯತ್ನಿಸುವುದನ್ನು ಕೆಲವು ಸಂಘಗಳು

ಪುಟ 8ಕ್ಕೆ

ಭೂಸಂಬಂಧಗಳು ಭೂಮಾಲೀಕ ಬಂಡವಾಳ ಶಾಹಿ ರಾಜಕೀಯ ಪಕ್ಷಗಳ ಅಸ್ತಿತ್ವ

-ಚಂದ್ರಶೇಖರ ಬಾಳೆ

ದೇಶದಲ್ಲಿ ಒಂದೆಡೆ ಸಿ.ಪಿ.ಐ.(ಎಂ) ನೇತೃತ್ವದಲ್ಲಿ ಎಡಪಕ್ಷಗಳು ಹಾಗೂ ಎಡಪಕ್ಷಗಳು ಬೆಂಬಲಿಸುವ ರೈತ-ಹಾಗೂ ಕೃಷಿ ಕೂಲಿಕಾರ ಸಂಘಟನೆಗಳು, ಭೂಸಂಬಂಧಗಳನ್ನು ತೀವ್ರಗತಿಯಲ್ಲಿ ಬದಲಾವಣೆ ಮಾಡಲೋಸುಗ ಮತ್ತು ಕರ್ನಾಟಕದಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಸಿ ಮತ್ತು ಡಿ ಭೂಮಿಗಾಗಿ, ಆಂಧ್ರಪ್ರದೇಶ, ತಮಿಳ್ನಾಡಿನಲ್ಲಿ, ಪಶ್ಚಿಮ ಬಂಗಾಳ ಕೇರಳಾದಲ್ಲಿ, ಖಾಸಗೀ ಹೆಚ್ಚುವರಿ ಭೂಮಿಗಾಗಿ, ಇನ್ನಿತರ ರಾಜ್ಯಗಳಲ್ಲಿ ಹಲವಾರು ರೀತಿಯ ಭೂಮಿಯನ್ನು ಹಿಡಿಯಲು ಸಾಗು ಮಾಡುವಲ್ಲಿ, ಪಟ್ಟಾ ಪಡೆಯಲು ಚಳುವಳಿಯನ್ನು ನಡೆಸುತ್ತಿದೆ. ಹಾಗೆಯೇ ಅಧಿಕಾರದಲ್ಲಿರುವಾಗಲೆಲ್ಲಾ ಪಶ್ಚಿಮಬಂಗಾಳ, ಕೇರಳಾ, ತ್ರಿಪುರಾ ರಾಜ್ಯಗಳಲ್ಲಿ ಪ್ರಗತಿಪರ ಭೂ ಸುಧಾರಣೆಗಳನ್ನು ತಂದು ಭೂರಹಿತರಿಗೆ ಭೂಮಿಯನ್ನು ಕೊಡಿಸಲು ಸರ್ಕಾರದ ಯಂತ್ರವನ್ನೆ ಪಣ್ಕ್ಕಿಡಲಾಗುತ್ತಿದೆ. ಅದಕ್ಕಾಗಿ ಅಧಿಕಾರವನ್ನು ಕಳೆದುಕೊಂಡಂತಹ ಉದಾಹರಣೆಗಳು ಒಂದೆಡೆಯಾದರೆ.

ಇನ್ನೊಂದೆಡೆ ಸ್ವಾತಂತ್ರ್ಯಾನಂತರ ದಿಂದಲೂ ಭೂಸುಧಾರಣೆಯ ಘೋಷಣೆಯನ್ನು ಹಲವಾರು ರೀತಿಯಲ್ಲಿ ಬಳಸಿ, ಹಲವಾರು ಕಮಿಟಿಗಳನ್ನು ರಚಿಸಿ ಭೂಮಾಲೀಕರ ಹಿತವನ್ನು ಕಾಪಾಡುವ ಅಧಿಕಾರ ರೂಢ ಬಂಡವಾಳಶಾಹಿ ಭೂಮಾಲೀಕ ವರ್ಗಗಳ ಪ್ರತಿನಿಧಿ ಕಾಂಗ್ರೆಸ್ ಹಾಗೂ ಜನತಾ ಮತ್ತಿತರ ಬಲಪಕ್ಷಗಳಿವೆ.

ರಾಜಕೀಯ ದೃಢತೆ ಇದ್ದಾಗ ಮಾತ್ರ ಭೂಸುಧಾರಣೆ ಸಾಧ್ಯ ಎಂಬುದಕ್ಕೆ ಕೆಳಗಿನ ಅಂಕಿ ಅಂಶಗಳನ್ನು ಹಾಗೂ ಬಲ ಪಂಥೀಯ ರಾಜಕೀಯ ಪಕ್ಷಗಳ ಭವಿಷ್ಯವನ್ನು ನೋಡಿದರೆ ಸರಿಯಾದ ಅಂದಾಜು ಮಾಡಲು ಸಾಧ್ಯವಾಗುತ್ತದೆ.

ಬಂಡವಾಳಶಾಹಿ ಜಾಗತಿಕ ಬಿಕ್ಕಟ್ಟನ್ನು ಎದುರಿಸುವಾಗ, ದೇಶದ 'ಇ'ಯೂ ಕಾಂಗ್ರೆಸ್ಸಿಗೆ ಅಧಿಕಾರದಲ್ಲಿ ಮುಂದೆ ಹೋಗುವದು ಹೇಗೆ ಎಂಬ ಪ್ರಶ್ನೆ ಬಂದಾಗಲೆಲ್ಲಾ, ಹಲವಾರು ಘೋಷಣೆಗಳೊಂದಿಗೆ, ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುವ ಮುಖಾಂತರ ಬಿಕ್ಕಟ್ಟನ್ನು ಮುಂದೂಡುತ್ತಲೇ ಬಂದಿದ್ದಾರೆ. ಅದು ಈಗ ತೀವ್ರ ಉಲ್ಬಣಗೊಂಡಿದೆ. ಕಾಂಗ್ರೆಸ್ ಪಕ್ಷ ಭೂಮಾಲೀಕರ ಕಾಲಿಗೆ ಶರಣು ಹೋಗುವ ಮಟ್ಟಕ್ಕೆ ಮುಟ್ಟಿದ್ದರ ಪರಿಣಾಮವಾಗಿಯೇ, ಹರಿಜನರ, ಗಿರಿಜನರ ಮೇಲೆ ಹಲ್ಲೆ, ಮಹಿಳೆಯರ ಮಾನ ಭಂಗ, ಭೀಕರ ಕೋಮುಗಲಭೆ, ಸತಿ ಪದ್ಧತಿಯನ್ನು ವೈಭವೀಕರಿಸುವುದು, ಹರಿಜನರು ಮಂದಿರಗಳಿಗೆ ಹೋದರೆ ಹಲ್ಲೆ ಮಾಡುವ ಮೇಲ್ಜಾತಿಯ ಕೋಮುವಾದಿಗಳು, ಕೋಮುವಾದಿಗಳಿಗೆ ಮಣಿಯುವ ಮುಖಾಂತರ ಕಾಂಗ್ರೆಸ್ ಭೂಮಾಲೀಕರ ಅಟ್ಟಹಾಸಗಯಲು ಅವಕಾಶ ಮಾಡಿಕೊಟ್ಟಿದ್ದರ ಪರಿಣಾಮವಾಗಿಯೇ, ರಾಷ್ಟ್ರೀಯ ಐಕ್ಯತೆ ಕಾಂಗ್ರೆಸ್ಸಿನ ಕೈಯಲ್ಲಿ ಗಂಡಾಂತರದಲ್ಲಿದೆ ಯೆಂಬ ತೀರ್ಮಾನಕ್ಕೆ ಬರಲಾಗಿದೆ.

1967ರಲ್ಲಿ ಕಾಂಗ್ರೆಸ್ಸಿನಿಂದ ನೇಮಿತವಾದ ಪ್ರೊಫೆಸರ್ ಮಹಾಲ್ನೊಬಿಸ್ ಸಮಿತಿಯ ವರದಿ ಪ್ರಕಾರ ದೇಶದಲ್ಲಿ 6,30,00,000 ಎಕರೆ ಹೆಚ್ಚುವರಿ ಭೂಮಿ, ಭೂರಹಿತರಿಗೆ ಹಂಚಲು ಸಿಗುತ್ತದೆಂದು ಹೇಳಿದರು.

1970-71, ಕೇಂದ್ರದ ಸೆನ್ಸಸ್ ಪ್ರಕಾರ 2,9004000 ಎಕರೆ ಹೆಚ್ಚುವರಿಯೆಂದು ಹೇಳಲಾಯಿತು. 1975-76, ಕೇಂದ್ರದ ಸೆನ್ಸಸ್ ಪ್ರಕಾರ 2,1031000 ಎಕರೆ ಹೆಚ್ಚುವರಿಯೆಂದು ಹೇಳಲಾಯಿತು.

1980-81 ರ ಸೆನ್ಸಸ್ ಪ್ರಕಾರ 1,40,28000 ಎಕರೆ ಹೆಚ್ಚುವರಿಯೆಂದು ಹೇಳಲಾಯಿತು.

ಏಳನೇ ಪಂಚವಾರ್ಷಿಕ ಯೋಜನೆಗೆ ಬರುವಾಗ ಈ ಅಂಕಿ ಅಂಶಗಳನ್ನು ಕೊಡಲಾಯಿತು. 68,60000 ಎಕರೆ ಹೆಚ್ಚುವರಿಯಿದೆಯೆಂದು ಗುರುತಿಸಲಾಗಿದೆ. 44,70000 ಎಕರೆ ಹೆಚ್ಚುವರಿಯೆಂದು ಘೋಷಿಸಲಾಗಿದೆ. 23,30000 ಎಕರೆ ಸರ್ಕಾರ ವಶಪಡಿಸಿಕೊಂಡಿದೆ. 15,80000 ಎಕರೆ ಹಂಚಲಾಗಿದೆಯೆಂದು ಘೋಷಿಸಿದೆ.

ಹಂಚಿದ ಭೂಮಿಯಲ್ಲಿ ಪಶ್ಚಿಮ ಬಂಗಾಳದ ಎಡ ರಂಗ ಸರ್ಕಾರ ಹಂಚಿದ ಪಾಲು 8,21,346 ಅಂದರೆ ಅರ್ಧಕ್ಕಿಂತಲೂ ಹೆಚ್ಚು ಭೂಮಿ ಒಂದೇ ರಾಜ್ಯದಲ್ಲಿ ಹಂಚಲಾಗಿದೆ.

ದೇವರಾಜ ಅರಸರ ಕಾಲದಲ್ಲಿ 1974ರ ಭೂಸುಧಾರಣಾ ತಿದ್ದುಪಡಿ ಕಾಯ್ದೆ ದೇಶದಲ್ಲಿಯೇ ಪ್ರಗತಿಪರ ಯೆಂದು ಹೇಳುತ್ತಿದ್ದು ಕರ್ನಾಟಕದಲ್ಲಿ ಒಟ್ಟು ಹಂಚಿದ ಭೂಮಿ 1,14672 ಎಕರೆ ಮಾತ್ರ.

ಇದರಿಂದ ಸ್ಪಷ್ಟವಾಗಿ ಕಾಣುವದೇನೆಂದರೆ ಬಂಡವಾಳಶಾಹಿ ಭೂಮಾಲೀಕ ಸರ್ಕಾರಗಳಿಂದ, ಜಮೀನ್ದಾರರ ಭೂಮಿಯನ್ನು ಪ್ರಗತಿಪರ ಕಾಯ್ದೆ ರಚಿಸಿ, ಭೂಮಿ ಕಿತ್ತು, ಭೂರಹಿತರಿಗೆ ಹಂಚುವ ರಾಜಕೀಯ ಧೈರ್ಯವನ್ನು ಕಳೆದುಕೊಂಡಿವೆ.

ಈ ದೇಶದ ಬಹು ಸಂಖ್ಯಾತರು ಗ್ರಾಮೀಣ ಪ್ರದೇಶದಲ್ಲಿದ್ದು, ಅವರ ಮತಗಳೇ ಆಳುವ ಪಕ್ಷಗಳಿಗೆ ನಿರ್ಧಾರಾತ್ಮಕವಾಗಿವೆ. ಕಾರಣ ಅವರ ಮತಗಳನ್ನು ಇಂದು ಬಂಡವಾಳಶಾಹಿ ಬಲ ಪಂಥೀಯ ರಾಜಕೀಯ ಪಕ್ಷಗಳಿಗೆ ನೇರವಾಗಿ ರೈತ-ಕೃಷಿ ಕೂಲಿಕಾರರ ಮತಗಳನ್ನು ಪಡೆಯುವ ರಾಜಕೀಯ ನೈತಿಕತೆಯನ್ನು ಕಳೆದುಕೊಂಡಿವೆ. ಅದಕ್ಕೆ ಪ್ರಮುಖವಾಗಿ ಶೋಷಿತ ವಿಭಾಗದ ಸಮಸ್ಯೆಗಳಿಗೆ ಕಿಂಚಿತ್ತು ಪರಿಹಾರವನ್ನು ಕೊಡದೆರಿ, ಭೂಮಾಲೀಕರ ಶೋಷಣೆಗೆ ಅವಕಾಶ ಮಾಡಿಕೊಟ್ಟದ್ದು, ಹಿಂದೆ ಬದಲಾದ ಘೋಷಣೆಗಳನ್ನು ಕೆಲವು, ಸುಧಾರಣೆಗಳನ್ನು ತರುವ ಮುಖಾಂತರ ಮತಗಳನ್ನು ಪಡೆಯುತ್ತಿದ್ದರು. ಇಂದು ಹತ್ತಾರು ಚುನಾವಣೆಗಳನ್ನು ಕಂಡ ಜನ ಬಲ ಪಕ್ಷಗಳ ಅದರಲ್ಲಿಯೂ ಕಾಂಗ್ರೆಸ್ಸಿನಿಂದ ಬಣ್ಣವನ್ನು ಅರ್ಥಮಾಡಿಕೊಳ್ಳಹತ್ತಿದ್ದರ ಪರಿಣಾಮವಾಗಿ ಕಾಂಗ್ರೆಸ್ಸಿನಿಂದ ದೂರ ಸರಿಯುತ್ತಿದ್ದಾರೆ. ಅದಕಾರಣ ಗ್ರಾಮೀಣ ಶೋಷಿತರ ಮತವನ್ನು ಭೂಮಾಲೀಕರ ಮುಖಾಂತರ ಪಡೆಯಲು ಪ್ರಯತ್ನಿಸುತ್ತದೆ. ಹೀಗಾಗಿ ಭೂಮಾಲೀಕರ ಅಟ್ಟಹಾಸ ಹೆಚ್ಚಾಗಿ, ದಬ್ಬಾಳಿಕೆ, ದೌರ್ಜನ್ಯ, ಕೋಮುಗಲಭೆ ಇನ್ನೂ ಹೆಚ್ಚಾಗುತ್ತಾ ಹೊರಟಿದೆ.

ಈ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ಭೂ ಸಂಬಂಧಗಳನ್ನು ಬಿಡಿಸಿ ನೋಡಲು ಅನುಕೂಲವಾಗುವ ಹಿನ್ನೆಲೆಯಲ್ಲಿ ಒಂದು ತಾಲ್ಲೂಕಿನ ಉದಾಹರಣೆಯನ್ನು ಈ ಕೆಳಗೆ ಕೊಡಲಾಗಿದೆ ಕೆಳಗಿನ ಉದಾಹರಣೆಯಂತೆಯೇ ಎಲ್ಲಾ ಕಡೆ ಇದೆಯೆಂದಲ್ಲ, ಬದಲಾಗಿ ಅದನ್ನು ಅವಲೋಕಿಸಿದರೆ, ಭೂಸಂಬಂಧಗಳು ಭೂಮಾಲೀಕ, ಶ್ರೀಮಂತ ರೈತರ ಭೂಮಿಯ ಹಿಡಿತ ಕೃಷಿಕೂಲಿಕಾರ ಬಡರೈತರ, ನಿರ್ಗತಿಕ, ಬೇರೆ ಬೇರೆ ಕಡೆ, ಬೇರೆ ರೀತಿಯಲ್ಲಿರುವದಾದರೂ ಈ ನಿಟ್ಟಿನಲ್ಲಿ ನೋಡಲು ಅನುಕೂಲವಾದೀತು.

ನಡೆಯದ ನಾಣ್ಯವಾಗಿದ್ದ ಶ್ರೀ ವೀರೇಂದ್ರ ಪಾಟೀಲ ಕೇಂದ್ರದ ಮಂತ್ರಿಯ ಪದವಿಯನ್ನು ಕಳೆದುಕೊಂಡಿದ್ದು ಎಲ್ಲರಿಗೆ ಗೊತ್ತಿದೆ. ಇಂದು ರಾಜ್ಯದ ಕೆ.ಪಿ.ಸಿ.ಸಿ. ಅಧ್ಯಕ್ಷಗಿರಿಯನ್ನು ಇವರಿಗೆ ಕೊಟ್ಟದ್ದು ಸ್ಪಷ್ಟವಿದೆ. ರಾಜ್ಯದ ಬಹುಸಂಖ್ಯಾತ ಭೂಮಾಲೀಕರು ಜನತಾ ಕಡೆ ತಮ್ಮ ಒಲವನ್ನು ತಿರುಗಿಸಿದ್ದು, ಈಗ ಪಾಟೀಲರ ನಾಯಕತ್ವದಲ್ಲಿ ಲಿಂಗಾಯಿತ ಹಾಗೂ ಇತರ ಭೂಮಾಲೀಕರನ್ನು ಕಾಂಗ್ರೆಸ್ಸಿಗೆ ಮರಳಿ ತಂದು ಮಾಡುವ ಪ್ರಯತ್ನ ಹೊರತು ಇನ್ನೇನಿಲ್ಲ ಎಂಬುದು ಗಮನಾರ್ಹ.

ಕಾಂಗ್ರೆಸ್ಸಿನ ಓಟ್ ಬ್ಯಾಂಕ್

ರಾಯಚೂರು ಜಿಲ್ಲೆಯ ತುಂಗ-ಭದ್ರಾ ಎಡದಂಡೆಯ ಕಾಲುವೆಯ ಕೆಳಗಡೆ ಮಾನ್ವಿ ತಾಲ್ಲೂಕಿನ 175 ಹಳ್ಳಿಗಳಲ್ಲಿ ಸುಮಾರು 135 ಹಳ್ಳಿಗಳು ಕ್ಯಾಂಪ್‌ಗಳು ಸೇರಿದಂತೆ ನೀರಾವರಿಯಾಗಿದೆ. ಈ ಪ್ರದೇಶದಲ್ಲಿ ಭತ್ತ, ನೆಲಗಡಲೆ, ಹತ್ತಿ, ಜೋಳ, ಬೆಳೆಯುತ್ತಾರೆ. ಕರ್ನಾಟಕ ಭೂಸುಧಾರಣೆ ಕಾಯ್ದೆ ಪ್ರಕಾರ ಗೇಣಿಗೆ ಪಾಲಿಗೆ ಕೊಡುವುದು ಕಾಯ್ದೆ ಬಾಹಿರವಾಗಿದೆ. ಆದರೆ ಈ ತಾಲ್ಲೂಕಿನ ಪ್ರಮುಖ ಭೂ ಸಂಬಂಧವೇ ಭೂಮಾಲೀಕ, ಗೇಣಿದಾರ, ಪಾಲುದಾರ, ಕೃಷಿ ಕೂಲಿಕಾರ ಸಂಬಂಧವಾಗಿದೆ 50%ರಿಂದ 60% ಭಾಗ ಭೂಮಿ ಗೇಣಿಗೆ ಪಾಲಿಗೆ ಕೊಡಲಾಗಿದೆ. ಕೆಲವೆಡೆ ಭೂಮಾಲೀಕ, ಶ್ರೀಮಂತರೈತರು, ಸ್ಥಳದಲ್ಲಿಲ್ಲದ ಭೂಮಾಲೀಕರು ಪಾಲಿಗೆ ಕೊಟ್ಟರೆ ಇನ್ನೂ ಕೆಲವು ಸಣ್ಣ ರೈತರು ತಾವು ಮಾಡಲಾಗದೆ ಹೆಚ್ಚು ಭೂಮಿಯಿರುವವರಿಗೆ, ಅಥವಾ ಸಣ್ಣ ರೈತರಿಗೆ ಪಾಲಿಗೆ ಕೊಡುತ್ತಿದ್ದಾರೆ.

ನೀರಾವರಿ ಪ್ರದೇಶದಲ್ಲಿ ವಾಣಿಜ್ಯ ಬೆಳೆ ಬೆಳೆಯಬೇಕಾದರೆ ಹೆಚ್ಚು ಹಣ ಹಾಕಬೇಕಾಗುತ್ತದೆ. ಅವಶ್ಯಕತೆಯಿರುವ ಕಾಲು ಭಾಗದಷ್ಟು ಸಾಲವನ್ನು ಬ್ಯಾಂಕ್‌ಗಳು ನೀಡುತ್ತದೆ. ಅದನ್ನು ಪ್ರಭಾವಿ ರೈತರು ಭೂಮಾಲೀಕರು ಕಬಳಿಸುತ್ತಿದ್ದಾರೆ. ಅಂದರೆ ಬಹುಪಾಲು ಸಾಲವನ್ನು ಖಾಸಗೀ ವ್ಯಕ್ತಿಗಳೇ ಲೇವಾದೇವಿ ಮಾಡುತ್ತಾರೆ. ಪ್ರತಿ ಹಳ್ಳಿಗೆ ಕ್ಯಾಂಪಿಗೆ ಒಬ್ಬರೋ, ನಾಲ್ಕು ಜನರೋ ಕೆಲವೆಡೆ ಅದಕ್ಕೂ ಒಬ್ಬೊಬ್ಬರು ಹೆಚ್ಚಾಗಿರಬಹುದು. ಭೂಮಿಯನ್ನು ಕೊಡುವವರ ಜೊತೆಗೆ, ಬೀಜ, ಗೊಬ್ಬರ, ಕ್ರಿಮಿನಾಶಕ ಸೇರಿದಂತೆ, ಒಣಬೇಸಾಯ ಪ್ರದೇಶದಿಂದ ಟ್ರಾಕ್ಟರ್‌ನಲ್ಲಿ ಕೂಲಿಕಾರರನ್ನು ತಂದು ಅದಕ್ಕೂ ಹಣ ತಾವೇ ಕೊಡುತ್ತಾರೆ, ಕಣ ಮಾಡುವರೆಗೆ ಸಾಲಕೊಟ್ಟು ವರ್ಷಕ್ಕೆ 36% ಬಡ್ಡಿ ಹಾಕುತ್ತಾರೆ. ಅಂದರೆ 5-6, ತಿಂಗಳಲ್ಲಿ ಬೆಳೆ ಬಂದರೂ ವಾರ್ಷಿಕ ಬಡ್ಡಿಯನ್ನು ಹಾಕುತ್ತಾರೆ.

ಬೆಳೆದ ಮಾಲಿನಲ್ಲಿ 75% ಮಾಲೀಕನಿಗೆ 25% ಪಾಲುದಾರ ಅಥವಾ ಗೇಣಿದಾರನಿಗೆ, ಅವನ ಪಾಲಿಗೆ ಬಂದ ಬೆಳೆಯನ್ನು ಮಾಲೀಕನೇ ಖರೀದಿಸುತ್ತಾರೆ. 10%ರಷ್ಟಾದರೂ ಕನಿಷ್ಠ ಕಡಿಮೆ ಬೆಲೆಗೆ ಖರೀದಿಸುತ್ತಾನೆ, ಇದರಿಂದಾಗಿ ಒಂದೆಡೆ ಮಾಲಿಗೆ ಬೆಲೆ ಹೆಚ್ಚು ಕಡಿಮೆಯಾಗುವುದು ಕ್ರಿಮಿಕೀಟಗಳ ಬಾಧೆ ಪ್ರಕೃತಿ ವಿಕೋಪಗಳನ್ನು ಎದುರಿಸುವಾಗ ಮಾಲೀಕರ ಸಾಲ ತೀರದೆ ಅದರಲ್ಲಿ ಸಿಕ್ಕು ಹಾಕಿಕೊಂಡು ಅದರ ಚಕ್ರದಲ್ಲೇ ತಿರುಗುತ್ತಾರೆ. ಕೆಲವರು ಇದ್ದ ತಮ್ಮ ಭೂಮಿಯನ್ನು ಮಾಲೀಕರಿಗೆ ಮಾರಿ, ಭೂರಹಿತ ಕೃಷಿಕೂಲಿಕಾರರಾಗುತ್ತಾರೆ.

ಈ ರೀತಿ ಊರಿಗೆ ಕೇಂದ್ರ ಪ್ರಭಾವಿ ಬಲಾಢ್ಯ ಮಾಲೀಕರು ಇಡೀ ತಾಲ್ಲೂಕಿನಲ್ಲಿ 400-500 ಜನರಾಗಬಹುದು, ಇವರ ವ್ಯವಹಾರ ಲಕ್ಷಗಳಲ್ಲಿರುತ್ತದೆ. ಇವರುಗಳಲ್ಲಿ, ತಾಲ್ಲೂಕಿನ ಕೇಂದ್ರದಲ್ಲಿರುವ ಐದು ಜನ ಪ್ರಮುಖ ಲೇವಾದೇವಿಗಾರರಿಂದ ಹಣ ತರುತ್ತಾರೆ. ಅ, ಕ, ಬ, ಸ, ಆಗಿದ್ದಾರೆ, ಇವರಲ್ಲಿ ಮೂರು ಜನ ಕಾಂಗ್ರೆಸ್ ಮುಖಂಡರೇ ಒಬ್ಬನು ಯಾವ ಪಕ್ಷಕ್ಕೂ ಆಗಬಹುದು. ಇವರ ಲೇವಾದೇವಿ ಕೋಟಿಗಟ್ಟಲೇ ನಡೆಯುತ್ತದೆ. ಚುನಾವಣೆ ಬಂದಾಗ ಇವರು ಯಾವ ಪಕ್ಷಕ್ಕೆ ಬೇಕೋ ಆ ಪಕ್ಷಕ್ಕೆ ಮತ ಹಾಕಿಸಲು ಗ್ರಾಮೀಣ ಬಲಾಢ್ಯಗೆಳೆಯರಿಗೆ ಕರೆಕೊಡುತ್ತಾರೆ, ಇವರೇ ಕಾಂಗ್ರೆಸ್ಸಿನ ಓಟ್ ಬ್ಯಾಂಕ್‌ಗಳಾಗಿ ಯಾರಿಗೆ ಬೇಕೋ ಅವರಿಗೆ ಓಟ್ ಹಾಕಿಸುತ್ತಾರೆ.

ಅಂದರೆ ಈ ಸಂಬಂಧಗಳು ಮುಂದುವರಿದರೆ ಕಾಂಗ್ರೆಸ್ಸಿಗೆ ಹಾಗೂ ಇತರ ಬಂಡವಾಳಶಾಹಿ- ಭೂಮಾಲೀಕ ಪಕ್ಷಗಳಿಗೆ ರಾಜಕೀಯ ಅಸ್ತಿತ್ವವಿದೆ, ಇದರಲ್ಲಿ ಬದಲಾವಣೆ ಮಾಡುವ ಅವರಿಗೆ ರಾಜಕೀಯ ಮನಸ್ಸಿಲ್ಲ, ಹಾಗೇನಾದರೂ ಪ್ರಯತ್ನಿಸಿದರೆ ಭೂಮಾಲೀಕರು ತಮ್ಮ ಲಾಯಲ್ಟಿಯನ್ನು ಬದಲಾಯಿಸುತ್ತಾರೆ.

ಕೋಲಾರ ಜಿಲ್ಲಾ ಭೂಸುಧಾರಣಾ ಸಮಾವೇಶ

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಭೂ ಸುಧಾರಣಾ ಕಾಯ್ದೆ ಜಾರಿಗೆ ಬರಬೇಕಾದರೆ, ಕಮ್ಯೂನಿಸ್ಟ್ ಪಕ್ಷ ಹಾಗೂ ಕಿಸಾನಸಭಾದ ಧಿರೋದಾತ್ತ ಚಳುವಳಿಗಳ ಪರಿಣಾಮವಾಗಿದೆ ಎಂಬುದನ್ನು ಗಮನದಲ್ಲಿರಿಸಬೇಕಾಗಿದೆ. ಜೋಡಿ ಇನಾಮ ರದ್ಧತಿಗಾಗಿ ಕೆಲವೆಡೆ, ಗೇಣಿ ಭಾಗವನ್ನು ಕಡಿಮೆ ಮಾಡಲು ಒತ್ತಾಯಿಸಿ ತೀವ್ರ ಚಳುವಳಿಗಳು ಬೆಳೆದು ಬಂದವು, ಉತ್ತರಕನ್ನಡ, ದಕ್ಷಿಣಕನ್ನಡ, ಕೋಲಾರ, ಬೆಳಗಾಂ, ಶಿವಮೊಗ್ಗಾ, ಮಂಡ್ಯ, ತುಮಕೂರು, ಬಿಜಾಪುರ, ಇತರ ಕೆಲವು ಭಾಗಗಳಲ್ಲಿಯು ನಡೆದವು ಪ್ರಮುಖ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯೊಂದರಲ್ಲೇ ಸುಮಾರು 600 ಗ್ರಾಮಗಳಲ್ಲಿ ತೀವ್ರ ಚಳುವಳಿಯನ್ನು ನಡೆಸಲಾಗಿದೆ.

1948ರಿಂದ 1960ರವರೆಗೆ 600 ಹಳ್ಳಿಗಳಲ್ಲಿ, ವ್ಯಾಪಕ ಚಳುವಳಿ ನಡೆಸಿ, 8,500 ಕುಟುಂಬಗಳಿಗೆ ಗೇಣಿ ಭೂಮಿಯನ್ನು ಕಾಯಮ್‌ಗೊಳಿಸಲು ಸಾಧ್ಯವಾಗಿದೆ. ಆದರೆ ಭೂಮಿತಿ ಕಾಯ್ದೆಯ ಪ್ರಕಾರ ಒಂದು ಎಕರೆಯನ್ನು ಕೂಡ ಹೆಚ್ಚುವರಿ ಭೂಮಿ, ಸರ್ಕಾರ ಸ್ವಾಧೀನಪಡಿಸಿಕೊಂಡು ಭೂರಹಿತರಿಗೆ ಹಂಚಲಾಗಿಲ್ಲ, ರಾಷ್ಟ್ರದಲ್ಲಿಯೇ 1974ರ ಭೂಸುಧಾರಣೆಯೇ ಪ್ರಗತಿಪರವಾದದ್ದೆಂದು ಕರ್ನಾಟಕದ ಬುದ್ಧಿಜೀವಿಗಳು, ಆಳುವ ವರ್ಗಗಳು ಪ್ರಚಾರ ಮಾಡುತ್ತಿರುವುದರ ಗುಟ್ಟನ್ನು ಈ ಸಮಾವೇಶದಲ್ಲಿ ಬಯಲಿಗೆಳೆಯಲಾಯಿತು

ಸಮಾವೇಶದಲ್ಲಿ ಪಾಲ್ಗೊಂಡ 160 ಪ್ರತಿನಿಧಿಗಳಲ್ಲಿ ಅರ್ಧದಷ್ಟು ಜನ ಅಂದಿನ ಚಳುವಳಿಯಲ್ಲಿ ಪಾಲುಗೊಂಡವರಾಗಿದ್ದರು. ಕಾ॥. ಆರ್. ವೆಂಕಟರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾ॥ ಕೆ.ಎಂ.ವೆಂಕಟೇಶ್ ಅವರ ಸ್ವಾಗತ ಭಾಷಣದೊಂದಿಗೆ ಕೋಲಾರದ ಶಾದಿ ಮಹಲ್‌ನಲ್ಲಿ ಸಮಾವೇಶ ಶುರುವಾಯಿತು. ಕಾ॥ ಶ್ರೀರಾಮರೆಡ್ಡಿಯವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಭೂ ಸಮಾವೇಶಗಳನ್ನು ನಡೆಸುವ ಹಿನ್ನೆಲೆಯನ್ನು ವಿವರಿಸಿ ಭೂಮಿಯ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದರು. ಕಾಂಗ್ರೆಸ್ಸಿನ ಹೊರಗಡೆಯಿಂದ ಎಡಶಕ್ತಿಗಳು, ಅದಕ್ಕೆ ಕಾಂಗ್ರೆಸ್ಸಿನ ಒಳಗಡೆಯಿರುವ ಎಡ ಪಂಥೀಯ ಧೋರಣೆಯುಳ್ಳವರು ಬೆಂಬಲಿಸಿದರು. ಆದರೆ ಸ್ವಾತಂತ್ರ್ಯಾ ನಂತರ ಎಡ ಶಕ್ತಿಗಳು ಭೂಮಿಯ ಪ್ರಶ್ನೆಯನ್ನು ಮುಂದುವರಿಸಿ ಕೇರಳ ಪಶ್ಚಿಮ ಬಂಗಾಳದಲ್ಲಿ ಒಂದು ದೊಡ್ಡ ಸಾಧನೆಯನ್ನೇ ಮಾಡಲು ಸಾಧ್ಯವಾಗಿದೆ.

ಇನ್ನೊಂದೆಡೆ ಕಾಂಗ್ರೆಸ್ ಭೂಮಿಯ ಬಗ್ಗೆ ಸಾಕಷ್ಟು ಮಾತನಾಡಿದರೂ ಪಾಳೆಯಗಾರೀ ಭೂಮಾಲೀಕ ಪದ್ಧತಿಯನ್ನು ಬಂಡವಾಳ ಶಾಹೀಕರಣಗೊಳಿಸಲು ಮಾತ್ರ ಸಾಧ್ಯವಾಗಿದೆ ಮಧ್ಯವರ್ತಿಗಳನ್ನು ತೆಗೆದು ಹಾಕಲು ಸಾಧ್ಯವಾಗಿದೆಯೇ ವಿನಹ, ಭೂ ಸಂಬಂಧಗಳನ್ನು ಬದಲು ಮಾಡಲು ಹಾಗೂ ಭೂಮಿಯನ್ನು ಭೂರಹಿತರಿಗೆ ಕೊಡಲು ಸಾಧ್ಯವಾಗಿಲ್ಲವೆಂದು ವಿವರಿಸಿದರು.

ಇಂದು ಎರಡು ಪ್ರಶ್ನೆಗಳು ನಮ್ಮ ಮುಂದಿದೆ. ವ್ಯವಸ್ಥೆಯ ಚೌಕಟ್ಟಿನೊಳಗೆ ಪ್ರಗತಿಪರ ಭೂಸುಧಾರಣೆ ಮುಖಾಂತರ, ಕೃಷಿ ನೀತಿಯನ್ನು ಬದಲಾವಣೆ ಮಾಡುವ ಮುಖಾಂತರ ಕೋಟಿಗಟ್ಟಲೆ ಎಕರೆ ಹೆಚ್ಚಾಗಿರುವ ಭೂಮಿಯನ್ನು ಭೂ ರಹಿತರಿಗೆ ಹಂಚಿ, ದೇಶದ ಆಹಾರದ ಉತ್ಪಾದನೆಯನ್ನು ಹೆಚ್ಚಿಸಿ ದೇಶ ಎದುರಿಸುವ ಆರ್ಥಿಕ ಮುಗ್ಗಟ್ಟನ್ನು ಸುಧಾರಿಸಲು ಪ್ರಯತ್ನಿಸುವುದಾಗಿದೆ. ಇನ್ನೊಂದು ಮೂಲಭೂತ ಪ್ರಶ್ನೆಯಾದ ಕೃಷಿ ಕ್ರಾಂತಿಯನ್ನು ಮಾಡುವದಾಗಿದೆ. ಹಳೆಯ ಭೂ ಸಂಬಂಧಗಳನ್ನು ಬಳಸಿ ಆಳುವ ಪಕ್ಷಗಳು, ಅದರಲ್ಲೂ ಕಾಂಗ್ರೆಸ್ ತನ್ನ ಗ್ರಾಮೀಣ ಹಿಡಿತವನ್ನು ಸಡಿಲಗೊಳಿಸಲು ತಯಾರಿಲ್ಲ. ಕಾರಣ ಭೂಸುಧಾರಣೆ ಪ್ರಶ್ನೆಯನ್ನು ರಾಜಕೀಯ ದೃಢತೆಯಿಂದ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ.

ಪುಟ 6ಕ್ಕೆ

ಸಿ.ಪಿ.ಐ.(ಎಂ) ಹೋರಾಟಗಳು
ಬೀದರ್: ಸಮಗ್ರತೆ-ಐಕ್ಯತೆಗಾಗಿ ವಿಚಾರಗೋಷ್ಠಿ

ಬೀದರ್‌ನಲ್ಲಿ ಸಿಖ್ ಜನಾಂಗದ ಮೇಲೆ ನಡೆದ ಅಮಾನುಷ ಹಿಂಸಾಚಾರದ ಹಿನ್ನೆಲೆಯಲ್ಲಿ, ಎಲ್ಲಾ ಜನತೆಯ ನಡುವೆ ಸಾಮರಸ್ಯ ಕಾಯ್ದುಕೊಳ್ಳಲು ಸರ್ವಪಕ್ಷಗಳು ಜಂಟಿಯಾಗಿ ಜನ ಐಕ್ಯತಾ ವೇದಿಕೆಯೊಂದನ್ನು ರಚಿಸಿಕೊಂಡು ಜನವರಿ 15 ರಂದು 'ಬೀದರ್ ಗಲಭೆ ಪರಿಣಾಮ ಮತ್ತು ಮಾರ್ಗೋಪಾಯ'ದ ಕುರಿತು ವಿಚಾರಗೋಷ್ಠಿಯೊಂದನ್ನು ನಡೆಸಲಾಯಿತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳನ್ನೊಳಗೊಂಡು ಸರ್ವ ಪಕ್ಷಗಳ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಬೀದರ್‌ನ ಹಿಂಸಾಚಾರದಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಸನ್ಮಾನಿಸಲು ಬೀದರ್‌ನ ಶಕ್ತಿಕೇಂದ್ರ ಜನವರಿ 26ರಂದು ನಡೆಸುವ ಸಮಾರಂಭವನ್ನು ಖಂಡಿಸಿ ಇದನ್ನು ತಡೆಗಟ್ಟಬೇಕೆಂದು ಹಾಗೂ ಹುಮ್ನಾಬಾದ್ ತಾಲ್ಲೂಕಿನ ನಿರ್ಣಾ ಗ್ರಾಮದ ಬಳಿ ದಲಿತರ ಕೊಲೆಯಾದ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಗೋಷ್ಠಿಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಸಂಗ್ರಾಮ್‌ರವರು ಸೆಪ್ಟೆಂಬರ್ ದಂಗೆಯ ಕುರಿತು ನ್ಯಾಯಾಂಗ ತನಿಖೆಗಾಗಿ ನೇಮಿಸಲಾದ ಆಯೋಗದ ಮುಂದೆ ಘಟನೆಯ ಕುರಿತು ವಿವರವಾದ ಮಾಹಿತಿಯನ್ನು ನೀಡಲು ಸಂಗ್ರಾಮ ಅವರ ಅಧ್ಯಕ್ಷತೆಯಲ್ಲಿ ಉಪಸಮಿತಿಯನ್ನು ರಚಿಸಲಾಯಿತು.

ಗುಲ್ಬರ್ಗಾ

ಜನವರಿ 15 ರಂದು ಸಭೆ ಸೇರಿದ್ದ ಗುಲ್ಬರ್ಗಾ ಜಿಲ್ಲಾ ಸಮಿತಿ ಪ. ಬಂಗಾಳದಲ್ಲಿ ಗೂಂಡಾಗಳಿಂದ ಕೊಲೆಯಾದ ರಾಜ್ಯ ಸಭಾ ಸದಸ್ಯ ಗುರಿಂಗ್‌ರವರಿಗೆ ಹಾಗೂ ಪ್ರಸಿದ್ಧ ನಾಟಕಕಾರ ಸಫ್ದರ್ ಹಶ್ಮಿಯವರ ಕೊಲೆಯನ್ನು ಖಂಡಿಸಿ ಮೌನ ಆಚರಿಸಲಾಯಿತು. ಗುಲ್ಬರ್ಗಾ ಜಿಲ್ಲೆಯ ತೀವ್ರ ಹಸಿ ಬರಗಾಲದಿಂದ ಕೃಷಿ ಕಾರ್ಮಿಕರು ಕೈಗೆ ಕೆಲಸವಿಲ್ಲದೆ ನಗರಗಳಿಗೆ ವಲಸೆ ಹೋಗುತ್ತಿದ್ದಾರೆಂದು ನಿರ್ಣಯಿಸಿ ಈ ವಲಸೆಯನ್ನು ತಡೆಗಟ್ಟಲು ರಾಜ್ಯ ಸರಕಾರ ಕೂಡಲೇ ಕ್ರಮ ಜರುಗಿಸಿ ಕೃಷಿ ಕೂಲಿಕಾರರಿಗೆ ಕೆಲಸ ಒದಗಿಸಬೇಕೆಂದು ಜಿಲ್ಲಾ ಸಮಿತಿ ಒತ್ತಾಯಿಸಿದೆ. ಹಸಿರು ಕಾರ್ಡು ಒದಗಿಸುವಲ್ಲಿ ರಾಜ್ಯ ಸರ್ಕಾರ ವಿಳಂಬ ನೀತಿಯನ್ನು ಖಂಡಿಸಿ ಹಸಿರು ಕಾರ್ಡನ್ನು ಒದಗಿಸಬೇಕೆಂದು ಒತ್ತಾಯಿಸಿದೆ.

ವೃತ್ತಿಪರ ಶಿಕ್ಷಣ ಪಡೆದ ನಿರುದ್ಯೋಗಿಗಳು

ವೃತ್ತಿಪರ ಶಿಕ್ಷಣ ಪಡೆದ ಮುದಗಲ್ಲಿನ ಸುಮಾರು 100 ಜನ ನಿರುದ್ಯೋಗಿ ಯುವಕರು ಡಿ.ವೈ.ಎಫ್.ಐ. ನಾಯಕತ್ವದಲ್ಲಿ ಸಭೆ ಸೇರಿ ಜನವರಿ 6ರಂದು ಸಂಘಟಿಸಿಕೊಂಡು ಉದ್ಯೋಗಕ್ಕಾಗಿ ಹೋರಾಟ ನಡೆಸಲು ನಿರ್ಧರಿಸಿದರು. ಲಿಂಗಸುಗೂರು ತಾಲ್ಲೂಕು ಯುವನಾಯಕ ಹಾಗೂ ಸಂಘಟನಾ ಕಾರ್ಯದರ್ಶಿ ಕಾ॥ ಎಂ.ಎ.ಗನಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ನೂತನ ಸಮಿತಿಗೆ ಅಶೋಕ ಹುನಕುಂಟಿ (ಅಧ್ಯಕ್ಷ) ಬಸಯ್ಯ, ಗ್ಯಾನಪ್ಪ ತಮ್ಮಾಪುರ (ಉಪಾಧ್ಯಕ್ಷರು) ಮರಪ್ಪಮಟ್ಟೂರ (ಕಾರ್ಯದರ್ಶಿ) ಮಲ್ಲನಗೌಡ ತಲಿಕಟ್ಟಿ (ಸಹಕಾರ್ಯದರ್ಶಿ) ಗಿರಿರಾಜಕುಲಕರ್ಣಿ (ಖಜಾಂಚಿ).

ಪೀಸ್‌ಲವರ್ಸ್ ಕಪ್ ಪಂದ್ಯಾವಳಿ

ವಿಶ್ವಶಾಂತಿ ಚಳುವಳಿ ಜಗತ್ತಿನಲ್ಲೆಡೆ ಪ್ರಜ್ವಲಿಸುತ್ತಿರುವ ಈ ಕಾಲದಲ್ಲಿ ಶಾಂತಿ ಚಳುವಳಿ ಪರ ದುಡಿಯುವ ಜನಪರ ಸಂಘಟನೆಗಳು ಅಸಂಖ್ಯ ಈ ಚಳುವಳಿಗೆ ನೀಡುವ ಕೊಡುಗೆಗಳು ಅಷ್ಟೇ ಅಸಂಖ್ಯ. ಇತ್ತೀಚೆಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಬೆಂಗಳೂರು ನಗರದ ಕಲಾಸಿಪಾಳ್ಯಂ ಶಾಖೆ ಶಾಂತಿ ಚಳುವಳಿಗೆ ಮತ್ತೊಂದು ಗರಿಯನ್ನು ಸೇರಿಸಿತು. ಕ್ರಿಕೆಟ್ ಪಂದ್ಯಾವಳಿಗಳನ್ನು ನಡೆಸಿ 'ಪೀಸ್ ಲವರ್ಸ್‌ಕಂಪ್' ಪದಕವನ್ನು ಸ್ಪರ್ಧೆಯಲ್ಲಿ ವಿಜಯಗಳಿಸಿದ ತಂಡಕ್ಕೆ ನೀಡಲಾಯಿತು.

ಈ ಸಮಾರಂಭಕ್ಕೆ ಅಖಿಲ ಭಾರತ ಕಾರ್ಯದರ್ಶಿಗಳಾದ ಕಾ॥ ಹನನ್‌ಮುಲ್ಲಾ, ಎಂ.ಪಿ.ಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನ ವಿತರಣೆ ಮಾಡಿದರು. ರಾಜ್ಯ ಅಧ್ಯಕ್ಷ ಕಾ॥ ಹೆಚ್.ಎನ್. ನಾಗಮೋಹನದಾಸ್‌ರವರು ಸಮಾರಂಭದಲ್ಲಿ ಮಾತನಾಡಿದರು. ವರ್ತಕರಾದ ಪಿ.ಜಿ. ವೇಲನ್, ಹಾಗೂ ಟೈರ್ ರಿಟ್ರೇಡಿಂಗ್ ವರ್ತಕ ರಾಜನ್ ಮತ್ತಿತರರು ಭಾಗವಹಿಸಿದ್ದರು. ಜೆ.ಸಿ.ರಸ್ತೆಯ ಜರ್ನಲಿಸ್ಟ್ ಕಾಲೋನಿಯಲ್ಲಿರುವ 'ಕರ್ನಾಟಕ ಸವಿತಾ ಸಮಾಜ' ಭವನದಲ್ಲಿ ಜನವರಿ 20ರಂದು ನಡೆದ ಬಹುಮಾನ ವಿತರಣಾ ಸಮಾರಂಭ ನಡೆಯಿತು. ಕೆ.ಟಿ.ರಂಗಸ್ವಾಮಿ ಚೆಟ್ಟಿಯಾರ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮೊದಲಿಗೆ ಶಾಖೆಯ ಸಂಚಾಲಕ ಶ್ರೀ ಅಶೋಕನ್ ಸ್ವಾಗತಿಸಿ ಮಣಿಯವರು ಮುಖ್ಯ ಅತಿಥಿಗಳಿಗೆ ಮಾಲಾರ್ಪಣೆ ಮಾಡಿದರು.

ನಾಗರೀಕ ಸೌಲಭ್ಯಕ್ಕೆ ಒತ್ತಾಯ

ವಿರಾಜಪೇಟೆ ತಾಲ್ಲೂಕು ಬೇಟೋಳಿ ಮಂಡಲಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅರ್ಜಿ ಗ್ರಾಮದ ಹರಿಜನ-ಗಿರಿಜನ ಕೃಷಿ ಕೂಲಿಕಾರರು ವಿದ್ಯುತ್-ಕುಡಿಯುವ ನೀರು, ವಾಸಿಸಲು ಮನೆ ಇಲ್ಲದೆ, ಪಡಿತರ ವ್ಯವಸ್ಥೆಗಳಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವ ಕುರಿತು ಡಿ.ವೈ.ಎಫ್.ಐ. ಈಗಾಗಲೇ ಮಂಡಲ ಪಂಚಾಯಿತಿ ಗಮನಕ್ಕೆ ತಂದಿದೆ. ಮನವಿ ನೀಡಿ ತಿಂಗಳಾದರೂ ಕಾಂಗ್ರೆಸ ಆಡಳಿತದಲ್ಲಿರುವ ಈ ಮಂಡಲ ಪಂಚಾಯ್ತಿ ತೋರುತ್ತಿರುವ ನಿರ್ಲಕ್ಷ್ಯತನವನ್ನು ತೀವ್ರವಾಗಿ ಖಂಡಿಸಿರುವ ಡಿ.ವೈ.ಎಫ್.ಐ. ಆಂದೋಲನ ಸಂಘಟಿಸಲು ಕರೆ ನೀಡಿದೆ.

ನಿರುದ್ಯೋಗಿ ಶಿಕ್ಷಕರ ಸಮಾವೇಶ

ಶಿಕ್ಷಕ ತರಬೇತಿ ಪಡೆದ ಶಿಕ್ಷಕರ ಕುಷ್ಟಗಿ ತಾಲ್ಲೂಕು ಸಮಾವೇಶವನ್ನು ಡಿಸೆಂಬರ್ 24ರಂದು ಕೃಷಿ ಕಛೇರಿಯ ಬಳಿ ನಡೆಸಲಾಯಿತು. ಡಿ.ವೈ.ಎಫ್.ಐ.ಗೆ ಸೇರ್ಪಡೆಯಾಗಿರುವ ಈ ಸಂಘದ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಅಧ್ಯಕ್ಷ ಕಾ॥ ಸಿದ್ಧಪ್ಪನವರು ಭಾಗವಹಿಸಿ ಯುವಜನತೆ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆ ಕುರಿತು ಮಾತನಾಡಿದರು. ಸುರೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಸಮಿತಿಗೆ ಕಾ॥ ಶಂಕ್ರಯ್ಯ ಕೆಂಪಾಪುರಮಠ (ಅಧ್ಯಕ್ಷ) ಅಲ್ಲನಂದ ಹಾಗೂ ರುದ್ರಪ್ಪಮೇಟಿ (ಉಪಾಧ್ಯಕ್ಷರು) ಎಂ.ಡಿ.ಚೌಖತ್‌ಹುಸೇನ್ (ಕಾರ್ಯದರ್ಶಿ) ಸಾವಿತ್ರಿ ಚಳಿಗೇರ (ಸಹಕಾರ್ಯದರ್ಶಿ) ಮಲ್ಲಮಾಹಿರೇಮಠ (ಖಜಾಂಚಿ) ರವರುಗಳನ್ನು ಆಯ್ಕೆಮಾಡಲಾಯಿತು.

ಕಾಫಿ ಕ್ಯೂರಿಂಗ್ ಸರ್ವಸದಸ್ಯರ ಸಭೆ

ಚಿಕ್ಕಮಗಳೂರು ಕಾಫಿ ಕ್ಯೂರಿಂಗ್ ಮತ್ತು ಇತರ ಕಾರ್ಮಿಕ ಸಂಘಗಳ ಸರ್ವಸದಸ್ಯರ ಸಭೆ ಜನವರಿ 22ರಂದು ಸಂಘದ ಅಧ್ಯಕ್ಷ ಕಾ॥ ಸಿ.ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಮೊದಲಿಗೆ ಅಗಲಿದ ಜನಪ್ರಿಯ ನಾಟಕಕಾರ ಕಾ॥ ಸಫ್ದರ್ ಹಶ್ಮಿಯವರಿಗೆ ಹಾಗೂ ಕಾ॥ ಗುರಿಂಗ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿ ಈ ಇಬ್ಬರೂ ಸಂಗಾತಿಗಳನ್ನು ಕೊಲೆ ಮಾಡಿದ ಕೊಲೆಪಾತಕರಿಗೆ ಉಗ್ರಶಿಕ್ಷೆ ವಿಧಿಸಲು ಒತ್ತಾಯಿಸಲಾಯಿತು. ಕಾ॥ ಎ.ಕೆ. ವಿಶ್ವನಾಥ ಕಳೆದ ಸಾಲಿನ ಚಟುವಟಿಕೆಗಳ ವರದಿ ಮಂಡಿಸಿದರು. ಚರ್ಚೆ ನಂತರ ವರದಿ ಅಂಗೀಕರಿಸಲಾಯಿತು.

1. ರಾಜ್ಯ ಸರ್ಕಾರ ಕನಿಷ್ಠ ಕೂಲಿ ನಿರ್ಣಯ ಮಾಡಿ ನಾಲ್ಕು ತಿಂಗಳಾದರೂ ಜಾರಿಯಾಗದಿರುವುದನ್ನು ಖಂಡಿಸಿ ಶೀಘ್ರದಲ್ಲೇ ಪ್ರಕಟಣೆ ನಿರ್ಣಯ ಹೊರಡಿಸಬೇಕೆಂದು

2. ಮಂಜೂರು ಮಾಡಿರುವ ಕಾರ್ಮಿಕ ನ್ಯಾಯಾಲಯ ಕೂಡಲೇ ಕಾರ್ಯಾರಂಭ ಮಾಡಬೇಕು.

3. ಖಾಲಿ ಇರುವ ಕಾರ್ಮಿಕ ಅಧಿಕಾರಿ ಹುದ್ದೆಗೆ ಕೂಡಲೇ ನೇಮಿಸಬೇಕು.

ಮುಂದಿನ ಸಾಲಿಗೆ ಸಂಘಕ್ಕೆ ಕಾ॥ ಸಿ. ನಂಜುಂಡಪ್ಪ (ಅಧ್ಯಕ್ಷರು) ವಿ.ಸುಕುಮಾರ್, ಶ್ರೀಮತಿ ಜಾನಕಮ್ಮ (ಉಪಾಧ್ಯಕ್ಷರು) ಎ.ಕೆ.ವಿಶ್ವನಾಥ (ಪ್ರ. ಕಾರ್ಯದರ್ಶಿ) ಶ್ರೀಮತಿ ಎಸ್ ರಾಧ (ಖಜಾಂಚಿ) ಬಿ.ಇ.ಶಂಕರ್ ಸಂಘಟಕರಾಗಿರುವ 20 ಜನರ ಕಾರ್ಯಕಾರಿ ಸಮಿತಿ ಚುನಾಯಿಸಲಾಯಿತು. ಮೊದಲಿಗೆ ಸೋಮಶೇಖರ ಸ್ವಾಗತಿಸಿ ವಿ.ಸುಕುಮಾರ್ ವಂದಿಸಿದರು.

'ವಿಜ್ಞಾನ ಮೇಳ'ದಲ್ಲಿ ಗೊರ್ಬಚೇವ್‌ಗೆ ಶಹಬಾಷ್‌ಗಿರಿ

'ರೈಗಾ ಬೇಕು ಎನ್ನುವುದಕ್ಕೆ ಕಾರಣಗಳಿವೆ. ಬೇಡ ಎನ್ನುವುದಕ್ಕೆ ಹಲವು ಪರಿಹಾರಗಳಿವೆ. ಆದ್ದರಿಂದ ಕೈಗಾ ಬೇಕು. 'ಶಾಂತಿಗಾಗಿ ವಿಶ್ವಸಂಸ್ಥೆ ಅದಕ್ಕೆ ನನ್ನದೊಂದು ಪುಟ್ಟಮುತ್ತು' ವಿಶ್ವಶಾಂತಿಗಾಗಿ ದುಡಿಯುತ್ತಿರುವ ಗೊರ್ಬಚೆವ್ ನಿಜಕ್ಕೂ ಪ್ರಪಂಚದ ನಾಯಕ' ಹೀಗೆ ಹಲವಾರು ಅಭಿಪ್ರಾಯಗಳು ಮೂಡಿಬಂದದ್ದು ಹೈಸ್ಕೂಲಿನ ಮಕ್ಕಳಿಂದ.

ತಕ್ಕಡಿಯ ಒಂದೆಡೆ ಶಾಂತಿ ಇನ್ನೊಂದೆಡೆ ಯುದ್ಧ ತಕ್ಕಡಿ ಯಾರ ಪರ ಎಂಬ ಪ್ರಶ್ನೆ ಯುದ್ಧಭೂಮಿ, ಕೆಂಪುರಕ್ತ ಶಾಂತಿ ಕೆರಾರಿಗಳ ಮುಂದೆ ಎದೆಯೊಡ್ಡಿ ನಿಂತಿದ್ದಾರೆ ಕುಂಚ ಬಣ್ಣ ಹಿಡಿದ ಪ್ರೌಢಶಾಲೆಯ ಪುಟಾಣಿ ಹುಡುಗರು ಶಾಂತಿಯ ಪರ ಹಲವು ಚಿತ್ರಗಳನ್ನು ಬಿಡಿಸಿದರು.

ರಾಷ್ಟ್ರದ ಜನ ವಿಜ್ಞಾನ ಸಂಘಟನೆ ನೀಡಿದ ಕರೆಯ ಮೇರೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ರಾಜಾಜಿನಗರ ಘಟಕ ಹಮ್ಮಿಕೊಂಡಿದ್ದ ಒಂದು ವಾರದ 'ವಿಜ್ಞಾನ ಮೇಳ'ದಲ್ಲಿ ಮಕ್ಕಳು ಶಾಂತಿ ಪಾರಿವಾಳ ಬಿಡಿಸಿದರು. ಹಿರೋಷಿಮಾ ನಾಗಸಾಕಿ ದುರಂತದ ವಿರುದ್ಧ ದನಿ ಎತ್ತಿದರು. ವಿಶ್ವಸಂಸ್ಥೆ, ಗೊರ್ಬಚೆವ್‌ಗೆ ಶಹಬಾಷ್‌ಗಿರಿ ನೀಡಿದರು.

ಕೈಗಾ ಅಣುಸ್ಥಾವರ ಬೇಕೆ ಬೇಡವೆ? ಭೂಪಾಲ್ ದುರಂತ, ಯುದ್ಧ ಬೇಡ ಶಾಂತಿ ಬೇಕು, ನಮ್ಮ ಪರಿಸರ ಕುರಿತು ಏರ್ಪಡಿಸಿದ್ದ ಪ್ರಬಂಧ ಹಾಗೂ ಚಿತ್ರರಚನೆ ಸ್ಪರ್ಧೆಗೆ ಅತ್ಯುತ್ಸಾಹದ ಪ್ರತಿಕ್ರಿಯೆ ಕಂಡುಬಂತು. ಹಲವು ದುರಂತಗಳ ಕರಾಳ ಮುಖಗಳ ಅರಿವು ಮಕ್ಕಳಿಗಿರುವುದು ಬೆಳಕಿಗೆ ಬಂತು.

ಕ.ರಾ.ವಿ.ಪ. ರಾಜಾಜಿನಗರ ಘಟಕ ಜ. 2ರಿಂದ 7ರವರೆಗೆ 12 ಶಾಲೆಗಳಲ್ಲಿ ವಿಜ್ಞಾನ ಚಲನ ಚಿತ್ರ, ಸ್ಲೈಡ್‌ಪ್ರದರ್ಶನ, ಟೆಲಿಸ್ಕೋಪ್ ಮೂಲಕ ಆಕಾಶ ವೀಕ್ಷಣೆ ಸಾವನದುರ್ಗ ಕಾಡುಗಳಲ್ಲಿ ಪ್ರಕೃತಿ ಶಿಬಿರ, ಪುಟಾಣಿ ಪ್ಲಾನಿಟೋರಿಯಂ ಮೂಲಕ ಖಗೋಳಲೋಕದ ಪರಿಚಯ ಪರಿಸರ ಕುರಿತು 300 ಪೋಸ್ಟರ್‌ಗಳ ಪ್ರದರ್ಶನ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಜೊತೆಯಲ್ಲೇ ಸ್ಪರ್ಧೆಗಳೂ ನಡೆದವು.

ದಿನಾಂಕ 7ರಂದು ಒಂದು ವಾರದ ವಿಜ್ಞಾನ ಮೇಳದ ಸಮಾರೋಪ ಸಮಾರಂಭ ಏರ್ಪಡಿಸಲಾಗಿತ್ತು. ಘಟಕದ ಸಂಚಾಲಕರಾದ ಜಿ.ಎನ್.ಮೋಹನ್‌ರವರು ಮೇಳದಲ್ಲಿ ಕಂಡುಬಂದ ಕುತುಹಲಕಾರಿ ವಿಷಯಗಳನ್ನು ವಿವರಿಸುತ್ತಾ ಪ್ರಶ್ನೆ ಮಾಡಬೇಕಾದ ಅವಶ್ಯಕತೆಯನ್ನು ಕುರಿತು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ಎಸ್.ಆರ್.ಆರಾಧ್ಯರವರು 'ಶಾಂತಿಗಾಗಿ ವಿಜ್ಞಾನ' ಎಂಬ ವಿಷಯದ ಬಗ್ಗೆ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಜ್ಞಾನಿ ಜಿ.ಎನ್. ನಾಗರಾಜ್ ಬಹುಮಾನ ವಿತರಿಸಿ ಜನವಿಜ್ಞಾನ ಚಳುವಳಿಯ ಬಗ್ಗೆ ಪರಿಚಯ ಮಾಡಿ ಅದರ ಅಗತ್ಯತೆಯನ್ನು ಕುರಿತು ಮಾತನಾಡಿದರು. "ಈ ಕಾರ್ಯಕ್ರಮ ನಮ್ಮಲ್ಲಿ ಹೊಸ ಉತ್ಸಾಹ ಹುಟ್ಟಿಹಾಕಿದೆ. ಪ್ರಪಂಚದ ವಿದ್ಯಾಮಾನಗಳ ಬಗ್ಗೆ ಪುಟಾಣಿ ಮಕ್ಕಳಿಗಿರುವ ಅರಿವು ನಮಗೆ ಇಂತಹ ಹಲವು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲು ಪ್ರೋತ್ಸಾಹ ನೀಡಿದೆ" ಎಂದು ಘಟಕದ ಸಂಚಾಲಕ ಮೋಹನ್‌ರವರು ಹೇಳಿದರು.

ಎಸ್.ಎಫ್.ಐ. ದ.ಕ. ಸಮ್ಮೇಳನ

"ಇಂದು ಶಾಲೆಯಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಯ ವೈಚಾರಿಕ ಚಿಂತನೆಯನ್ನು ಬೆಳೆಸುವ ಬದಲಿಗೆ ಪಠ್ಯಪುಸ್ತಕಗಳು ದೇವರು, ಧರ್ಮಗಳು, ಮೂಢನಂಬಿಕೆಗಳನ್ನು ಬೋಧಿಸುವಂಥ ರೀತಿಯಲ್ಲಿ ರೂಪಿತವಾಗುತ್ತಿವೆ ಎಂದು ಖ್ಯಾತ ಸಾಹಿತಿ ಶ್ರೀಮತಿ ಸಾರಾ ಅಬೂಬಕರ್‌ರವರು ಶಿಕ್ಷಣದ ವ್ಯವಸ್ಥೆ ಕುರಿತು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಅವರು ದಕ್ಷಿಣ ಕನ್ನಡಜಿಲ್ಲೆ 6ನೇ ಸಮ್ಮೇಳನವನ್ನು ಜನವರಿ 15 ರಂದು ಕುಂದಾಪುರದ ನೆಹರೂ ಆಟದ ಮೈದಾನದಲ್ಲಿ ಉದ್ಘಾಟಿಸಿ ಮಾತ ನಾಡುತ್ತಿದ್ದರು.

ನಮ್ಮ ಸರ್ಕಾರಗಳು ಕೋಮುವಾದಿಗಳೊಂದಿಗೆ ಕೈ ಜೋಡಿಸಿ ಜನರ ನಡುವೆ ಒಡಕನ್ನುಂಟುಮಾಡಿ, ದಲಿತರಿಗೆ ಮಲ ತಿನ್ನಿಸುವ ಹೀನ ಕೃತ್ಯ ಎಸಗುವವರಿಗೆ ಯಾವುದೇ ಶಿಕ್ಷೆ ವಿಧಿಸುವುದಿಲ್ಲವೆಂದು ಟೀಕಿಸಿದರು. ರಾಜೀವ್ ಗಾಂಧಿಯವರ ನೂತನ ಶಿಕ್ಷಣ ನೀತಿಜನ ಸಾಮಾನ್ಯರನ್ನು ಶಿಕ್ಷಣದಿಂದ ವಂಚಿಸಿ ಅನರಕ್ಷತೆ ಬೆಳೆಸಲು ಕಾರಣವಾಗಿದೆ. ಮುಸ್ಲಿಂ ಮಹಿಳೆಯರನ್ನು ಧರ್ಮದ ಹೆಸರಿನಲ್ಲಿ ವಂಚಿಸಲಾಗುತ್ತಿದೆ ಎಂದರು.

ಎಸ್.ಎಫ್.ಐ. ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಕಾ॥ ಜಿ.ಸಿ.ಬೈಯಾರೆಡ್ಡಿ ಹಾಗೂ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್‌ರವರು ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ದೇಶದಲ್ಲಿ ಬೆಳೆದು ಬರುತ್ತಿರುವ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ವಿದ್ಯಾರ್ಥಿ ಸಮುದಾಯದ ಪಾತ್ರ ಹಾಗೂ ಸಂಘಟನೆಯ ನಿಲುವುಗಳ ಕುರಿತು ಮಾತನಾಡಿದರು. ಮೊದಲಿಗೆ ಕಾ॥ ಕೆ.ವಿಶ್ವನಾಥ್ ಸ್ವಾಗತಿಸಿ ಕಾ॥ ಎಂ.ಜಿ.ಜಯಚಂದ್ರ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನಕ್ಕೆ ಶುಭಾಶಯ ಕೋರಿ ಸಿ.ಐ.ಟಿ.ಯು. ಸಮುದಾಯ, ಡಿ.ವೈ.ಎಫ್.ಐ., ರೈತ ಸಂಘದ ಮುಖಂಡರು ಮಾತನಾಡಿದರು.

ರಾಜ್ಯ ಅಧ್ಯಕ್ಷ ಕಾ॥ ಬೈಯಾರೆಡ್ಡಿಯವರು ಉದ್ಘಾಟಿಸಿ ಸಮಾರಂಭಕ್ಕೆ ಮೊದಲು ಧ್ವಜಾರೋಹಣ ಮಾಡಿದರು. ಸಮುದಾಯದಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಪ್ರತಿನಿಧಿ ಅಧಿವೇಶನ

ಕಾ॥ ಎಂ.ಜಿ.ಜಯಚಂದ್ರ, ಕೆ.ಪಿ. ಸುಜಾತ ವಸಂತರವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮ್ಮೇಳನದ ಕಲಾಪ ನಡೆಸಿಕೊಟ್ಟಿತು. ಜಿಲ್ಲಾಕಾರ್ಯದರ್ಶಿ ಕಾ॥ ಕೃಷ್ಣಪ್ಪ ಕೊಂಚಾಡಿ ಮಂಡಿಸಿದ ವರದಿ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು.

ಮೆರವಣಿಗೆ ಬಹಿರಂಗ ಸಭೆ

ಭಾರತ 2000ನೇ ಇಸವಿ ವೇಳೆಗೆ ವಿಶ್ವದಲ್ಲೇ ಅತ್ಯಂತ ಹೆಚ್ಚು ಅನಕ್ಷರಸ್ತರನ್ನು ಹೊಂದಿದ ದೇಶವಾಗಿರುತ್ತದೆ. ಸಾರ್ವತ್ರಿಕ ಶಿಕ್ಷಣವೆಂಬುದು ಹೋಗಿ ಶ್ರೀಮಂತ ವರ್ಗಕ್ಕೆ ಸೀಮಿತಗೊಳಿಸಲ್ಪಡುತ್ತದೆ. ಇದು ಈ ದೇಶದ ಯುವ ಪ್ರಧಾನಿ ರಾಜೀವ್‌ಗಾಂಧಿಯವರು ತಂದಿರುವ ನೂತನ ಶಿಕ್ಷಣ ನೀತಿಯ ಕೊಡುಗೆ ಎಂದು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್‌ರವರು ಹೇಳಿದ್ದಾರೆ. ಅವರು ಕುಂದಾಪುರದಲ್ಲಿ ದ.ಕ. ಜಿಲ್ಲಾ ಸಮ್ಮೇಳನದ ರ್‍ಯಾಲಿ ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಬಲಿಷ್ಠವಾದ ಐಕ್ಯ ಹೋರಾಟ ನಡೆಸಬೇಕೆಂದು ರಾಜ್ಯ ಅಧ್ಯಕ್ಷ ಜಿ.ಸಿ.ಬೈಯಾರೆಡ್ಡಿಯವರು ಕರೆ ನೀಡಿದರು. ನೂತನ ಜಿಲ್ಲಾ ಸಮಿತಿ ಅಧ್ಯಕ್ಷ ಕಾ॥ ವಿ.ಚಂದ್ರಶೇಖರ್ ಅಧ್ಯಕ್ಷತೆ ವಹಿಸಿ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ ಸಮ್ಮೇಳನದಲ್ಲಿ ಸ್ವೀಕರಿಸಿದ ನಿರ್ಣಯಗಳನ್ನು ವಿವರಿಸಿದರು. ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳ ಬೃಹತ್ ರ್‍ಯಾಲಿಯನ್ನು ನಡೆಸಲಾಯಿತು.

ಗಾಂಧಿ-ನೆಹರೂ ಪರಂಪರೆ

ನೆಹರೂ ಜನ್ಮ ಶತಾಬ್ದಿ ಆಚರಣೆ ಅದ್ಧೂರಿಯಿಂದ ಆರಂಭವಾಗುತ್ತಿದೆ. ಸ್ವಾಭಾವಿಕವಾಗಿಯೇ ಜವಾಹರಲಾಲ ನೆಹರೂ ನಮಗೆ ಬಿಟ್ಟು ಹೋದ ಆಸ್ತಿ ಅವರ ಅನುಯಾಯಿಗಳು ಮುಂದುವರಿಸುತ್ತಿರುವ ಪರಂಪರೆಯ ಬಗ್ಗೆ ಬಾಯಿ ತುಂಬಾ ಮಾತುಗಳು ಕೇಳಿಬರುತ್ತಿವೆ. ಅಷ್ಟೇ ಅಲ್ಲ, ಮಹಾತ್ಮಗಾಂಧಿಗೂ ಹಾಗೂ ನೆಹರೂ ನಡುವೆ ಸೈದ್ಧಾಂತಿಕ ಮತ್ತು ಸ್ವಭಾವದಲ್ಲಿ ಭಿನ್ನತೆಗಳಿದ್ದರೂ ಇವರಿಬ್ಬರ ನಡುವೆ ನಿಕಟ ಸಹಚರ್ಯೆಯಿಂದಾಗಿ, ಇವರಿಬ್ಬರೂ ಪರಸ್ಪರ ವ್ಯಕ್ತಿತ್ವಗಳಿಗೆ ಪೂರಕವಾಗಿದ್ದುದರಿಂದಲೂ ನೆಹರೂ ಪರಂಪರೆಯ ಮಾತು ಸಹಜವಾಗಿಯೇ ಗಾಂಧಿ ಮತ್ತು ನೆಹರೂ ಪರಂಪರೆಯ ಕಡೆಗೂ ತಿರುಗುತ್ತಿದೆ. ಏನಿದು ಗಾಂಧೀ-ನೆಹರೂ ಪರಂಪರೆ? ನಮ್ಮ ಸ್ವಾತಂತ್ರ್ಯ ಚಳುವಳಿಯ ಈ ಇಬ್ಬರು ಮಹಾನ್ ನೇತಾರರು ತಮ್ಮ ಜೀವನದ ಆಕಾಂಕ್ಷೆಗಳನ್ನು ಪೂರೈಸದೆ ಸಾಯುವ ಪರಿಸ್ಥಿತಿ ಏಕೆ ಬಂತು?

ಇ.ಎಂ.ಎಸ್. ನಂಬೂದರಿಪ್ಪಾಡ್‌ರವರ ವಿಶ್ಲೇಷಣೆ ಇಲ್ಲಿದೆ.

ಇದು ಕಾ॥ ಇ.ಎಂ.ಎಸ್.ರವರ ಇತ್ತೀಚಿನ ಕೃತಿ "Nehru-Idealogy and Practice" (ನೆಹರೂ-ಸಿದ್ಧಾಂತ ಮತ್ತು ಆಚರಣೆ)ನ ಕೊನೆಯ ಅಧ್ಯಾಯದ ಅನುವಾದ.

ಐವತ್ತೇಳು ವರ್ಷಗಳ ಹಿಂದೆ (1931ರಲ್ಲಿ) ನಾನು ಮಲೆಯಾಳಂ ಭಾಷೆಯಲ್ಲಿ ಜವಾಹರಲಾಲ್ ನೆಹರೂ ಕುರಿತು ಒಂದು ಚಿಕ್ಕ ಪುಸ್ತಕ ಬರೆದಿದ್ದೆ. ನನಗಾಗ ನೆಹರೂ ಮೇಲೆ ತುಂಬಾ ಅಭಿಮಾನ. ಮಹಾತ್ಮಗಾಂಧಿ ಅವರನ್ನು ಕಾಂಗ್ರೆಸ್‌ನ ಲಾಹೋರ್ ಅಧಿವೇಶನದ ಅಧ್ಯಕ್ಷತೆಗೆ ಆರಿಸಿದ್ದರು. ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಅವರು ಸಂಘಟನೆಯ ಮುಖ್ಯಸ್ಥರಾಗಿದ್ದರು. ನೆಹರೂರವರಲ್ಲಿ ನನಗಿದ್ದ ಆಕರ್ಷಣೆಯೆಂದರೆ ಮಹಾತ್ಮಗಾಂಧಿಯವರು ಕೆಲವಾರು ಅಂಶಗಳಲ್ಲಿ ಸಂಪ್ರದಾಯವಾದಿಗಳಾಗಿದ್ದಂತೆ ನೆಹರೂ ಆಗಿರಲಿಲ್ಲ. ಅವರು ರಾಜಕೀಯ ವಿಷಯಗಳಲ್ಲಿ ಮಾತ್ರವೇ ಅಲ್ಲ, ಸಾಮಾಜಿಕ-ಸಾಂಸ್ಕೃತಿಕ ಮತ್ತು ಆರ್ಥಿಕ ವಿಚಾರಗಳಲ್ಲೂ ತೀವ್ರಗಾಮಿಯಾಗಿದ್ದರು. ನಾನು ವಿದ್ಯಾರ್ಥಿ ದೆಸೆಯಲ್ಲೇ ರಾಷ್ಟ್ರೀಯ, ಅಂತರಾಷ್ಟ್ರೀಯ ರಾಜಕೀಯದಲ್ಲಿ, ಸಾಮಾಜಿಕ ಸುಧಾರಣೆ, ಸಾಂಸ್ಕೃತಿಕ ಪ್ರಗತಿ ಹಾಗೂ ಆರ್ಥಿಕ ಅಭಿವೃದ್ಧಿಯ ಬಗ್ಗೆ ಅತೀವ ಉತ್ಸುಕನಾಗಿದ್ದೆ. ಆದ್ದರಿಂದ ಮಹಾತ್ಮಗಾಂಧಿಯವರ ಬಗ್ಗೆ ಪೂಜ್ಯ ಭಾವವಿದ್ದರೂ ನೆಹರೂ ಬಗ್ಗೆ ನನಗೆ ಪಕ್ಷಪಾತವೇ ಇತ್ತು. ನನಗೆ ಅವರು "ಭಾರತೀಯ ಯುವ ಜನರ ಆರಾಧ್ಯ ಮೂರ್ತಿ"ಯಾಗಿದ್ದರು.

ಎರಡು ವರ್ಷಗಳ ನಂತರ 1933ರಲ್ಲಿ ಕಾಂಗ್ರೆಸ್ ಪಕ್ಷ ಸವಿನಯ ಕಾನೂನು ಭಂಗ ಆಂದೋಲನವನ್ನು ವಾಪಸು ಪಡೆದುದರಿಂದ ಉಂಟಾದ ಬಿಕ್ಕಟ್ಟಿನ ಮೂಲಕ ಹಾದು ಹೋಗುತ್ತಿದ್ದಾಗ ನೆಹರೂರವರು 'ಭಾರತ ಎತ್ತ ಸಾಗಿದೆ?' ಎಂಬ ಶಿರೋನಾಮೆಯಡಿ ಬರೆದ ಲೇಖನ ಮಾಲೆ ನನ್ನನ್ನು ಆಕರ್ಷಿಸಿತು. ಈ ಲೇಖನಗಳು ಕಾಂಗ್ರೆಸ್ಸಿನಲ್ಲಿದ್ದ ಮತ್ತು ಸಂಘಟಿತ ಎಡಪಂಥೀಯ ಗುಂಪುಗಳಲ್ಲಿದ್ದ ತೀವ್ರಗಾಮಿಗಳಿಗೆ ಒಂದು ರೀತಿಯ ಕಾರ್ಯಕ್ರಮ ಕೊಟ್ಟಂತಾಗಿತ್ತು. ಈ ಲೇಖನಗಳಲ್ಲಿದ್ದ ವಿಚಾರಗಳು ಮರುವರ್ಷ ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಡಿಗಲ್ಲಾದವು. ಈ ಹೊಸ ಪಕ್ಷದ ಒಬ್ಬ ಸ್ಥಾಪಕ ಸದಸ್ಯನಾಗಿ ಮತ್ತು ಜೊತೆ ಕಾರ್ಯದರ್ಶಿಯಾಗಿ ಇತರ ಸಮಾಜವಾದೀ ಮುಖಂಡರಂತೆ (ಇವರಲ್ಲಿ ಕೆಲವರು ನಂತರ ಉನ್ನತ ಕಮ್ಯೂನಿಸ್ಟ್-ವಿರೋಧಿಗಳಾದರು) ಮೊತ್ತ ಮೊದಲಬಾರಿಗೆ ನಾನು ಕಮ್ಯೂನಿಸ್ಟರೊಂದಿಗೆ ಸಂಪರ್ಕಿಸಿ ಬಂದೆ. [illegible] ಜೊತೆಗೆ ಕೆಲಸ ಮಾಡಿದ ಅನುಭವ ಸುಂದರಯ್ಯ, ಘಾಟೆ, ಅಜಯ್‌ಘೋಷ್ ಮುಂತಾದವರೊಡನೆ ಮಾತುಕತೆಯಿಂದ ಕಮ್ಯೂನಿಸ್ಟರಿಗೆ ಕಾಂಗ್ರೆಸ್ ಸಮಾಜವಾದಿಗಳಿಗಿಂತ ಹೆಚ್ಚು ನಂಬಲರ್ಹ ಕಾರ್ಯಕ್ರಮದ ಆಧಾರವಿರುವ ದೃಷ್ಟಿಕೋನವಿದೆ ಎಂಬುದು ನನಗೆ ಮನವರಿಕೆಯಾಯಿತು. ಆದ್ದರಿಂದ 1936 ರಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದೆ. ಮರುವರ್ಷ ಇತರ ಮೂವರು ಸಂಗಾತಿಗಳೊಂದಿಗೆ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ಘಟಕ ಸ್ಥಾಪಿಸಿದೆ.

ಸ್ವಲ್ಪ ಸಮಯ ಕಾಂಗ್ರೆಸ್ ಸಮಾಜವಾದಿಗಳಿಗೆ ಮತ್ತು ಕಮ್ಯೂನಿಸ್ಟರಿಗೆ ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲ. ಅಷ್ಟೇ ಅಲ್ಲ. ಈ ಎರಡು ಎಡಪಕ್ಷಗಳು ಮತ್ತು ಹಲವು ಎಡ ಒಲವಿನ ಕಾಂಗ್ರೆಸ್ಸಿಗರು (ಇವರಲ್ಲಿ ನೆಹರು ಅತ್ಯಂತ ಪ್ರಮುಖರು) ಒಟ್ಟಾಗಿ ಸಾಮ್ರಾಜ್ಯಶಾಹಿ-ವಿರೋಧಿ ಸಂಯುಕ್ತ ರಂಗ ರಚಿಸಿಕೊಂಡರು. ಆದರೆ ಈ ಸಹಕಾರ ಅಲ್ಪಾವಧಿಯದಾಗಿತ್ತು. ಕಾಂಗ್ರೆಸ್‌ನ 39ನೇ ಅಧಿವೇಶನದಲ್ಲಿ (ತ್ರಿಪುರಿಯಲ್ಲಿ) ಅದು ದುರ್ಬಲಗೊಂಡಿತು. ಅಂದಿನಿಂದ ಕಮ್ಯೂನಿಸ್ಟರು, ಸೋಶಲಿಷ್ಟರು ಮತ್ತು ಸುಭಾಷ್‌ಬೋಸ್ ಬೆಂಬಲಿಗರು ಪರಸ್ಪರ ಹೊಡೆದಾಡಲಾರಂಭಿಸಿದರು. ನೆಹರೂ ಇವರೆಲ್ಲರಿಂದ ದೂರ ನಿಂತು ಆಗ ಬಲಪಂಥೀಯವೆಂದು ಪರಿಗಣಿಸಲ್ಪಟ್ಟಿದ್ದ ಕಾಂಗ್ರೆಸ್ ಮುಖಂಡತ್ವದೊಂದಿಗೆ ಕೈಮಿಲಾಯಿಸುತ್ತಾ ಹೋದರು.

ನನ್ನ ವೈಯುಕ್ತಿಕ ಅನುಭವ ಅಂದರೆ ಜವಾಹರಲಾಲ್ ನೆಹರೂರವರ ಒಬ್ಬ ಯುವಕ ಅಭಿಮಾನಿಯಿಂದ ಒಬ್ಬ ಕಮ್ಯೂನಿಸ್ಟನಾಗಿ, ನೆಹರೂರವರ ರಾಜಕೀಯ ವಿರೋಧಿಯಾಗಿ ನನ್ನ ಪರಿವರ್ತನೆ, ಅದೇ ರೀತಿ "ಭಾರತೀಯ ಯುವಜನರ ಆರಾಧ್ಯಮೂರ್ತಿ"ಯಿಂದ ಕಾಂಗ್ರೆಸ್‌ನ ಬಲಪಂಥೀಯ ಮುಖಂಡತ್ವದ ನಂಬಲರ್ಹ ಮಿತ್ರರಾಗಿ ನೆಹರೂರವರ ಪರಿವರ್ತನೆ- ನನ್ನನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕೋನದಿಂದ ನೆಹರೂರವರ ವ್ಯಕ್ತಿತ್ವದ ವಿಕಾಸದ ಅಧ್ಯಯನ ಮಾಡುವಂತೆ ಪ್ರೇರೇಪಿಸಿತು. ಈ ಅಧ್ಯಯನದಿಂದ ನೆಹರೂರವರ ತಂದೆ ಮೋತಿಲಾಲ್, ಅವರ ರಾಜಕೀಯ ಗುರು, ಗಾಂಧೀಜಿ ಮತ್ತು ಸ್ವತಃ ನೆಹರೂ ಒಂದೇ ವರ್ಗದ, ಭಾರತೀಯ ಬೂರ್ಜ್ವಾ ವರ್ಗದ, ಮೂರು ಮುಖಗಳು ಎಂಬ ತೀರ್ಮಾನಕ್ಕೆ ಬಂದಿದ್ದೇನೆ.

ಹಿಂದೆ ಮಹಾತ್ಮಗಾಂಧಿಯವರ ವ್ಯಕ್ತಿತ್ವ ಮತ್ತು ಕೃತಿಯ ಬಗ್ಗೆಯೂ ಇಂತಹದೊಂದು ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಅಧ್ಯಯನ ಮಾಡಿದ್ದೆ. ಅಲ್ಲಿ ಮಹಾತ್ಮಗಾಂಧಿಯವರ ವಿಚಾರಗಳು ಹಾಗೂ ಆಚರಣೆಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ತೂಗಿ ನೋಡುವ ಪ್ರಯತ್ನ ಮಾಡಿದ್ದೆ. ಗಾಂಧೀಜಿಯ ವ್ಯಕ್ತಿತ್ವದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡರ ಮೂಲವೂ ಒಬ್ಬ ವ್ಯಕ್ತಿಯಾಗಿ ಗಾಂಧೀಜಿಯ ಹಾಗೂ ಅವರ ವಿಚಾರಧಾರೆಯ ವರ್ಗ ಸ್ವಭಾವದಲ್ಲೇ ಅಡಗಿದೆ ಎಂದು ವಿಶ್ಲೇಷಣೆಯಿಂದ ಕಂಡುಕೊಂಡೆ. ಬೂರ್ಜ್ವಾ ವರ್ಗದ ದ್ವಿಮುಖ ವರ್ಗ ಸ್ವಭಾವಕ್ಕೆ ಅಂದರೆ, ಜನ ಸಮೂಹಗಳನ್ನು ಅಣಿನೆರೆಸುವಾಗ ಸಾಮ್ರಾಜ್ಯಶಾಹಿ-ವಿರೋಧ ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ರಾಜಿ ಬೇಕಾದಾಗ ಜನ ಸಮೂಹಗಳನ್ನು ಸಮರಶೀಲ ಹೋರಾಟಗಳಿಂದ ದೂರವಿಡುವ ದ್ವಿಮುಖ ಸ್ವಭಾವ. ಗಾಂಧೀಜಿಯವರ ಪ್ರಮುಖ ಬೋಧನೆಯಾದ ಸಾಮ್ರಾಜ್ಯಶಾಹಿಯೊಂದಿಗೆ ಅಹಿಂಸಾತ್ಮಕ ಅಸಹಕಾರ ಒಂದು ಉತ್ತಮ ಉದಾಹರಣೆ.

ಆ ಪುಸ್ತಕ ಮತ್ತು ನಂತರ ಭಾರತದ ಸ್ವಾತಂತ್ರ್ಯ ಆಂದೋಲನದ ಇತಿಹಾಸ ಕುರಿತಾದ ಪುಸ್ತಕದಲ್ಲಿ ನಾನು ಭಾರತೀಯ ಬೂರ್ಜ್ವಾ ವರ್ಗ ಒಂದು ವರ್ಗವಾಗಿ ವಿಕಾಸಗೊಂಡುದನ್ನು ಪರಿಶೀಲಿಸಿದ್ದೆ. ಸ್ವಲ್ಪಕಾಲ ಮಂದಗಾಮಿ ರಾಜಕೀಯದ ನಂತರ ತಿಲಕರು ಹಾಗೂ ಗಾಂಧೀಜಿಯಂತಹ ಮುಖಂಡರು ಹೇಗೆ ಜನ ಸಮೂಹಗಳನ್ನು ಸಮರಶೀಲ ಸಾಮ್ರಾಜ್ಯಶಾಹಿ-ವಿರೋಧಿಕಾರ್ಯಾಚರಣೆಗಳಿಗೆ ಇಳಿಸಲು ಯಶಸ್ವಿಯಾದರು ಎಂಬುದನ್ನು ತೋರಿಸಿದ್ದೆ. ಇದೇ ಪ್ರಕ್ರಿಯೆಯ ಮುಂದಿನ ಬೆಳವಣಿಗೆಗಳೆಂದರೆ "ಭಯೋತ್ಪಾದಕರು" ಎಂದು ಕರೆದ ಕ್ರಾಂತಿಕಾರಿಗಳ ನೇತೃತ್ವದ ತೀವ್ರಗಾಮಿ, ಸಮರಶೀಲ ಆಂದೋಲನಗಳು, ಪ್ರಥಮ ಮಹಾಯುದ್ಧದ ನಂತರದ ಮೊದಲ ವರ್ಷಗಳಲ್ಲಿ ಹುಟ್ಟಿಕೊಂಡ ಸಣ್ಣ ಕಮ್ಯೂನಿಸ್ಟ್ ಗುಂಪುಗಳು, ಸಂಘಟಿತ ಭಾರತ ಕಮ್ಯೂನಿಸ್ಟ್ ಪಕ್ಷ ಹಾಗೂ ಅದರ ವಿಶಾಲ ರಂಗವಾದ ಭಾರತದ ಕಾರ್ಮಿಕರ ಮತ್ತು ರೈತರ ಪಕ್ಷ ಮುಂತಾದವು.

ಈ ಸಾಮ್ರಾಜ್ಯಶಾಹೀ-ವಿರೋಧ ಇಡೀ ದೇಶದ ಅಮೂಲ್ಯ ಆಸ್ತಿಯಾಗಿತ್ತು. ನೆಹರೂ ಮತ್ತು ಇತರ ತೀವ್ರಗಾಮೀ ಗುಂಪುಗಳು ಇದನ್ನೇ ಮುಂದುವರಿಸಿದರು. ಆದರೆ ಅದರಲ್ಲಿ ಕೆಲವು ಭಿನ್ನತೆಗಳಿದ್ದವು. 'ಮುಂದುವರಿಸಿದರು' ಎಂದರೆ ಅರ್ಥ ಸ್ವಾತಂತ್ರ್ಯ ಆಂದೋಲನಕ್ಕೆ ಸ್ಫೂರ್ತಿ ನೀಡಿದ್ದ ಸ್ವಾತಂತ್ರ್ಯಬೇಕೆಂಬ ಸರಳ

> **ನೆಹರೂರವರ ತಂದೆ ಮೋತಿಲಾಲ್, ಅವರ ರಾಜಕೀಯ ಗುರು ಗಾಂಧೀಜಿ ಮತ್ತು ಸ್ವತಃ ನೆಹರೂ ಒಂದೇ ವರ್ಗದ, ಭಾರತೀಯ ಬೂರ್ಜ್ವಾ ವರ್ಗದ ಮೂರು ಮುಖಗಳು.**

ಆಕಾಂಕ್ಷೆಯ ಮುಂದುವರಿದ ರೂಪವಾಗಿತ್ತು. ಈ ಗುಂಪುಗಳ ಹಾಗೂ ನೆಹರೂರವರ ಸಾಮ್ರಾಜ್ಯಶಾಹೀ-ವಿರೋಧ. 'ಭಿನ್ನತೆ'ಯೆಂದರೆ ಈಗ ಒಂದು ಹೊಸ ವರ್ಗ (ಕಾರ್ಮಿಕ ವರ್ಗ) ಮತ್ತು ಹೊಸ ಜನ ಸಮೂಹಗಳು (ಅಂದರೆ ರೈತಾಪಿವರ್ಗ ಮತ್ತು ಮಧ್ಯಮ ವರ್ಗಗಳ) ಸ್ವತಂತ್ರ ವರ್ಗಶಕ್ತಿಯಾಗಿ ಆಂದೋಲನವನ್ನು ಸೇರಿಕೊಂಡಿದ್ದವು.

ಭಾರತದ ಕಾರ್ಮಿಕ ವರ್ಗ ಮತ್ತು ಅದರ ರೈತ ಹಾಗೂ ಪುಟ್ಟ ಬೂರ್ಜ್ವಾ ಸಹವರ್ತಿಗಳು ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ರೂಪುಗೊಂಡ ಪ್ರಕ್ರಿಯೆಯ ಹಲವು ಹಂತಗಳು ಇಂತಿವೆ- ಮೊದಲ ಕಮ್ಯೂನಿಸ್ಟ್ ಗುಂಪುಗಳು, ಈ ಗುಂಪುಗಳು ಭಾರತೀಯ ಕಮ್ಯೂನಿಸ್ಟ್ ಪಕ್ಷವಾಗಿ ಮತ್ತು ಭಾರತೀಯ ಕಾರ್ಮಿಕ ಮತ್ತು ರೈತರ ಪರವಾಗಿ ಗಟ್ಟಿಯಾಗಿನೆಲೆಗೊಂಡದ್ದು: ಈ ಹೊಸ ಸಿದ್ಧಾಂತ ಮತ್ತು ರಾಜಕೀಯವನ್ನು ದೊಡ್ಡ ಸಂಖ್ಯೆಯಲ್ಲಿ ಕ್ರಾಂತಿಕಾರಿಗಳು (ಭಗತ್‌ಸಿಂಗ್ ಸೇರಿ) ಅಂಗೀಕರಿಸಿದ್ದು: ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿಯ ಉದಯ ಮತ್ತು ಕಮ್ಯೂನಿಸ್ಟ್ ಪಕ್ಷಕ್ಕೆ ಐಕ್ಯ ಕೇಂದ್ರವೊಂದರ ರೂಪುಗೊಳ್ಳುವಿಕೆ. ಈ ವರ್ಗಗಳು ಮಹಾತ್ಮಗಾಂಧಿ ನಾಯಕತ್ವದ ಬೂರ್ಜ್ವಾ ವರ್ಗದಿಂದ ಸ್ವತಂತ್ರರಾಗತೊಡಗಿದ್ದವು.

1930ರ ದಶಕದ ಹೊತ್ತಿಗೆ ಒಂದಕ್ಕೊಂದು ವಿರುದ್ಧವಾದ ಸಾಮಾಜಿಕ ಶಕ್ತಿಗಳು ಬೂರ್ಜ್ವಾ ಮತ್ತು ಕಾರ್ಮಿಕ ವರ್ಗ- ಒಂದು ಐಕ್ಯರಂಗದಲ್ಲಿ ಜತೆಗಾರರಾಗಿದ್ದರು. ಆದರೂ ಭಾರತದ ಕ್ರಾಂತಿಯ ಮೂಲಭೂತ ವಿಷಯಗಳಲ್ಲಿ ಪರಸ್ಪರ ಸೆಣಸಾಟ ಮುಂದುವರಿದಿತ್ತು. ಭಾರತದ ಸಮಾಜವನ್ನು ಬದಲಾಯಿಸುವ ವಿಚಾರದಲ್ಲಿ ಈ ಎರಡು ವರ್ಗಗಳು ಪ್ರತ್ಯೇಕವಾಗಿ ನಡೆಯುತ್ತಿದ್ದರೂ, ವಸಾಹತುವಾದದ ವಿರುದ್ಧ ಒಟ್ಟಾಗಿ ಹೊಡೆಯತೊಡಗಿದರು. ದೇಶವನ್ನು ವಿದೇಶೀ ಆಡಳಿತದಿಂದ ವಿಮುಕ್ತಗೊಳಿಸುವ ಸಾಮಾನ್ಯ ಕಾರ್ಯಕ್ರಮದ ಜತೆಗೂಡಿದ್ದರು. ಈ ಐಕ್ಯರಂಗದ ಅತ್ಯಂತ ಪ್ರಾತಿನಿಧಿಕ ವಕ್ತಾರ ಮತ್ತು ನಾಯಕ ಜವಾಹರಲಾಲ ನೆಹರೂ ಆಗಿದ್ದರು.

ಈ ಐಕ್ಯರಂಗದ ಕೆಲಸದ ಮೂರು ವರ್ಷಗಳ ಅವಧಿಯ ಕೊನೆಯ ಹೊತ್ತಿಗೆ ಕಮ್ಯೂನಿಸ್ಟರು, ಸೋಶಲಿಸ್ಟರು ಮತ್ತು ಇತರ ಎಡ ಪಕ್ಷಗಳಿಗೆ ಜವಾಹರಲಾಲ ನೆಹರೂ ಅವರನ್ನು ಜಂಟಿ ನಾಯಕನಾಗಿ ಕಾಣಲಾರಂಭಿಸಿದರು. ಆದರೆ ತ್ರಿಪುರಿ ಕಾಂಗ್ರೆಸ್ (1939)ನ ನಂತರದ ಬೆಳವಣಿಗೆ ನೆಹರೂ ಮತ್ತು ಕಮ್ಯೂನಿಸ್ಟರ ನಡುವೆ ಬಿರುಕಿಗೆ ನಾಂದಿಯಾಯಿತು ವೈಯಕ್ತಿಕವಾಗಿ ಹೇಳುವುದಾದರೆ 1931 ರ ನೆಹರೂ ಪುಸ್ತಕದ ಲೇಖಕನಾಗಿ ಮತ್ತು ಈ ಪುಸ್ತಕದ ಲೇಖಕನಾಗಿ ನನ್ನಲ್ಲಿ ಬಿರುಕು ಇದೇ ಸಮಯಕ್ಕಾಯಿತು. 1931ರ ಪುಸ್ತಕದಲ್ಲಿ ನಾನು ನೆಹರೂ ವನ್ನು ಹೊಗಳಿದ್ದೆ. ಆ ಪುಸ್ತಕದಲ್ಲಿ ನೆಹರೂ ಮಹಾತ್ಮರವರ ಯೋಚನೆ ಮತ್ತು ಕಾರ್ಯಗಳಲ್ಲಿರುವ ಹಲವು ಕೊರತೆ, ತಪ್ಪುಗಳನ್ನು ನಿವಾರಿಸುತ್ತಿದ್ದಾರೆ ಎಂದಿದ್ದೆ. ಈ ಪುಸ್ತಕದಲ್ಲಿ ನೆಹರೂ ಮಹಾತ್ಮರಿಂದ ತಮ್ಮ ದೂರವನ್ನು ಉಳಿಸಿಕೊಳ್ಳುವುದರ ಜೊತೆಗೆ ಹಂತಹಂತವಾಗಿ ಹೇಗೆ ಮಹಾತ್ಮರ ವಿಶ್ವಾಸಾರ್ಹ ಸಹವರ್ತಿ ಮತ್ತು ಶಿಷ್ಯರಾಗಿ ವರ್ತಿಸಿದರು ಎಂದು ತೋರಿಸಿದ್ದೇನೆ.

ಕಾಂಗ್ರೆಸ್‌ನ ಲಾಹೋರ್ ಅಧಿವೇಶನದಲ್ಲಿ ಅಧ್ಯಕ್ಷರಾಗಿ ಆಯ್ಕೆ ಮಾಡುವಾಗ ಮಹಾತ್ಮರವರು ಅವರಿಂದ ಏನು ಬಯಸಿದ್ದರೋ ಅದು ನೆಹರೂ ಆಮೇಲಿನ ವರ್ಷಗಳಲ್ಲಿ ಹೇಗೆ ಆ ರೀತಿಯೇ ವರ್ತಿಸಿದರು ಎಂದೂ ನಾನು ಆ ಪುಸ್ತಕದಲ್ಲಿ ತೋರಿಸಿದ್ದೇನೆ. 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ನೆಹರೂರವರು ಕ್ರಾಂತಿಕಾರಿ ಶಬ್ದಾವಳಿಗಳನ್ನು ಬಳಸಿದ್ದರೂ ಮತ್ತು ಆ ಮೇಲಿನ ಹೇಳಿಕೆಗಳಲ್ಲೂ ಇದು ಕಂಡು ಬಂದಿದ್ದರೂ ಇವು ಕೊನೆಗೆಅವರು ಮಹಾತ್ಮರ ನಂಬಿಕಸ್ತ ಸಹವರ್ತಿ ಮತ್ತು ಸಂಗಾತಿಯಾಗುವುದನ್ನು ತಡೆಯಲಾಗಲಿಲ್ಲ. ಪಟೇಲ್, ರಾಜಗೋಪಾಲಾಚಾರಿ, ಮತ್ತು ರಾಜೇಂದ್ರ ಪ್ರಸಾದ್‌ರಂತಹ ಬಲಪಂಥೀಯ ನಾಯಕರ ಜತೆ ನೆಹರೂ ತ್ರಿಪಕ್ಷೀಯ ಮಾತುಕತೆ (ಬ್ರಿಟಿಷ್ ಆಳರಸರು ಮತ್ತು ಮುಸ್ಲಿಂ ಲೀಗ್ ಜತೆ)ಗಳಿಗಾಗಿ ಕಾರ್ಯವಿಧಾನ ಮತ್ತು ಕಾರ್ಯತಂತ್ರಗಳನ್ನು ರೂಪಿಸಿದರು. ಈ ಕಾರ್ಯವಿಧಾನ ಭಾರತದ ವಿಭಜನೆ- ಎರಡು ಸಾರ್ವಭೌಮ, ಆದರೆ ಪರಸ್ಪರ ವೈರಿಗಳಾದ ದೇಶಗಳನ್ನು (ಭಾರತ ಮತ್ತು ಪಾಕಿಸ್ತಾನ) ಸೃಷ್ಟಿಸುವ- ಮತ್ತು ಅದರೊಂದಿಗೆ ನಡೆದ ಅತ್ಯಂತ ಭೀಕರ ನರಮೇಧಗಳಿಗೆ ದಾರಿ ಮಾಡಿಕೊಟ್ಟಿತು. ಮಹಾತ್ಮ ಮತ್ತು ನೆಹರೂರಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಅಂತಹುದು ಏನಾದರೂ ಇರುವುದಾದರೆ ಇಷ್ಟೇ- ಮಹಾತ್ಮರವರು ಭಾರತದ ಸ್ವಾತಂತ್ರ್ಯದ ಹೋರಾಟದ ಕೊನೆ

> **ಇವರಿಬ್ಬರಲ್ಲಿ ಗಾಂಧೀಜಿ ಒಂದಂಗುಲ ಎತ್ತರ ಏಕೆಂದರೆ ತಮ್ಮ ಕನಸು ನುಚ್ಚುನೂರಾಗಿದ್ದನ್ನು ಅವರು ಸಾರ್ವಜನಿಕವಾಗಿ ಒಪ್ಪಿಕೊಂಡರು.**

ತನ್ನ ವೈಯುಕ್ತಿಕ ಸೋಲು ಎಂದು ಭಾವಿಸಿದರೆ, ನೆಹರೂ ಅದನ್ನು ಆಂಶಿಕ ವಿಜಯ ಮತ್ತು ಇದರ ಮೇಲೆ ತಮ್ಮ ಸರ್ಕಾರ ಹೊಸ ಸ್ವತಂತ್ರ ಭಾರತವನ್ನು ಕಟ್ಟಬಹುದು ಎಂದು ಭಾವಿಸಿದ್ದರು.

ದೈವಭೀರು ಮಾನವವಾದಿ ಯಾದ ಗಾಂಧಿಗೆ 1947ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದ ರೀತಿ ಸಹನೀಯವಾಗಲಿಲ್ಲ. ಅವರು ದೇಶಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯದ ಸಮಾರಂಭಗಳಲ್ಲಿ ಭಾಗವಹಿಸಲು ನಿರಾಕರಿಸಿದ ಒಬ್ಬರೇ ರಾಷ್ಟ್ರೀಯ ನಾಯಕರಾಗಿದ್ದರು. ಅವರು ಹಿಂದೂ ಮತ್ತು ಮುಸ್ಲಿಮರ ಸೋದರಭಾವದ ನಾಶ, ವ್ಯಾಪಕ ಹಿಂಸಾಚಾರ, ಲೂಟಿ, ಬೆಂಕಿ, ಅತ್ಯಾಚಾರದ ಬಗ್ಗೆ ಹೆಚ್ಚು ಆತಂಕಿತರಾಗಿದ್ದರು. ಭಾರತದ ವಿಭಜನೆಯನ್ನು ಅವರು "ನನ್ನ

5ನೇ ಪುಟಕ್ಕೆ

4ನೇ ಪುಟದಿಂದ

ದೇಶದ ವಿಭಜನೆ" ಎಂದು ಕರೆದಿದ್ದರು. ಕಾಂಗ್ರೆಸ್ಸಿಗರು ಸ್ವಾತಂತ್ರ ಹೋರಾಟಗಾರರಿಂದ ದೇಶದ ಆಳರಸರಾಗಿ ತಮ್ಮನ್ನು ಪರಿವರ್ತಿಸಿಕೊಂಡಿದ್ದು, ಹೊಸ ಅವಕಾಶಗಳನ್ನು ತಮ್ಮ ವೈಯುಕ್ತಿಕ ಹಿತಾಸಕ್ತಿಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಮಹಾತ್ಮರಿಗೆ ವ್ಯಥೆಯಾಗಿತ್ತು. ಕಾಂಗ್ರೆಸ್ ಯಾವ ಉದ್ದೇಶಗಳಿಗಾಗಿ ಹುಟ್ಟಿತೋ ಅದು ಫಲಿಸಿರುವುದರಿಂದ ಆ ಸಂಘಟನೆಯನ್ನು ಬರಖಾಸ್ತು ಮಾಡಿ, ಅದನ್ನು ಲೋಕಸಭಾ ಸಂಘವಾಗಿ ಪರಿವರ್ತಿಸಬೇಕೆಂಬುದು ಅವರ ಸೂಚನೆಯಾಗಿತ್ತು.

ಆದರೆ ನೆಹರೂ ಗಾಂಧೀಜಿಯ ಇತರ ಶಿಷ್ಯರುಗಳಂತೆ (ಪಟೇಲ್, ರಾಜೇಂದ್ರ ಪ್ರಸಾದ್, ರಾಜಾಜಿ ಇತ್ಯಾದಿ) ಭಾರತ ವಿಭಜನೆಯಾದರೂ ಸ್ವಾತಂತ್ರ ಬಂದಿದ್ದಕ್ಕೆ ಸಂತೋಷದಿಂದಿದ್ದರು. ನೆಹರೂ ಮತ್ತು ಅವರ ಸಹವರ್ತಿಗಳು ಸಹ ದೇಶದ ವಿಭಜನೆ ಮತ್ತು ಅನಂತರದ ಕೋಮುಗಲಭೆಗಳ ಬಗ್ಗೆ ಅಷ್ಟೇ ಆತಂಕಿತರಾಗಿದ್ದರು. ಆದರೆ ಹೊಸದಾಗಿ ಸಿಕ್ಕಿರುವ ರಾಜಕೀಯ ಶಕ್ತಿಯಿಂದ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದೆಂದು ತಿಳಿದಿದ್ದರು. ಆದ್ದರಿಂದ ನೆಹರು ಹೊಸ ಸರ್ಕಾರದ ನಾಯಕನಾಗಿ ತಲೆದೋರಿದ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಿದರು. ಅವರಿಗೆ ಈ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಮ್ಮ ಮತ್ತು ತಮ್ಮ ಸರ್ಕಾರದ ಮೇಲೆ ಅಮಿತ ವಿಶ್ವಾಸವಿತ್ತು.

ಅವರ ವಿಶ್ವಾಸ ಒಂದೊಂದಾಗಿ ಹೇಗೆ ಹುಸಿಯಾಯಿತು ಎಂಬುದನ್ನು ಈ ಪುಸ್ತಕದಲ್ಲಿ ನಾನು ತೋರಿಸಲು ಪ್ರಯತ್ನಿಸಿದ್ದೇನೆ. ಸಾಯುವ ಹಲವು ವರ್ಷಗಳ ಮೊದಲೇ ಹೇಗೆ ಅವರು ಆಧ್ಯಾತ್ಮಿಕವಾಗಿ ಸತ್ತಿದ್ದರು ಎಂಬುದನ್ನೂ ನಾನು ತೋರಿಸಿದ್ದೇನೆ. ಕೋಮುವಾದದ ವಿಷ ಹರಡುವುದನ್ನು ತಪ್ಪಿಸುವಲ್ಲಿ (ಸ್ವಾತಂತ್ರ್ಯದ ಮೊದಲ ಕೆಲವು ತಿಂಗಳುಗಳಲ್ಲಿ ಇದಕ್ಕಾಗಿ ಗಾಂಧೀಜಿ ಜತೆ ಪ್ರಯತ್ನಿಸುತ್ತಿದ್ದರು); ಸ್ವಾತಂತ್ರ್ಯದ ಜತೆ ಬಳುವಳಿಯಾಗಿ ಬಂದ ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ; ಆರ್ಥಿಕ ಯೋಜನೆಗಳ ವೈಫಲ್ಯ (ಇದಕ್ಕೆ ಅವರು ವೈಯುಕ್ತಿಕ ಗಮನ ಕೊಟ್ಟಿದ್ದರು); ಅವರು ಯಾವಾಗಲೂ ಲೇವಡಿ ಮಾಡುತ್ತಿದ್ದ ಕಮ್ಯೂನಿಸ್ಟರು ಒಂದು ರಾಜ್ಯದಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ರಚಿಸಲು ಪ್ರಯತ್ನಿಸಿದ್ದು; ಕೇರಳದಲ್ಲಿ ಮುಸ್ಲಿಂಲೀಗ್ ರಾಜಕೀಯ ಚುನಾವಣಾ ಮೈತ್ರಿಯನ್ನು ಸ್ವತಃ ಆಶೀರ್ವದಿಸಿದ್ದು-ಇವೆಲ್ಲಾ ಸ್ವಾತಂತ್ರ ಹೋರಾಟದ ಕಾಲದ ಎಡ ಶಕ್ತಿಗಳ ನಾಯಕ ನೆಹರೂ ಮತ್ತು ಸ್ವಾತಂತ್ರ ನಂತರದ ಪ್ರಧಾನಿ ನೆಹರೂ ಭಿನ್ನಭಿನ್ನ ವ್ಯಕ್ತಿಗಳು ಎಂದು ತೋರಿಸುತ್ತವೆ. ಇಷ್ಟೆಲ್ಲಾ ವಿಫಲತೆಗಳ ಮೇಲೆ ನೆಹರೂ ತನ್ನ ಜೀವನದ ಅತ್ಯಂತ ಕಹಿ ಏಟು ಸಹಿಸ ಬೇಕಾಯಿತು. ಅದು

> ಹೊಸದಾಗಿ ದೊರೆತ ರಾಜಕೀಯ ಶಕ್ತಿಯಿಂದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನೆಹರೂಗೆ ತಮ್ಮ ಮತ್ತು ತಮ್ಮ ಸರ್ಕಾರದ ಮೇಲೆ ಅಮಿತ ವಿಶ್ವಾಸವಿತ್ತು. ಆದರೆ ಅವರ ಈ ವಿಶ್ವಾಸ ಒಂದೊಂದಾಗಿ ಹುಸಿಗೊಂಡಿತು. ದೈಹಿಕವಾಗಿ ಸಾಯುವ ಹಲವು ವರ್ಷಗಳ ಮೊದಲೇ ಅವರು ಆಧ್ಯಾತ್ಮಿಕವಾಗಿ ಸತ್ತಿದ್ದರು.

ಇಂಡೋ-ಚೀನಾ ಗಡಿಯಲ್ಲಿ ಅವರ ದುಸ್ಸಾಹಸದ ದುರಂತ ಕೊನೆ. ನೆಹರೂರ ಹದಿನೇಳು ವರ್ಷಗಳ ಪ್ರಧಾನಮಂತ್ರಿತ್ವ ಸಂಪೂರ್ಣ ವಿಫಲವಾಗಿತ್ತು ಎಂದು ಯಾವುದೇ ನಿಜವಾದ ವಿಶ್ಲೇಷಣೆ ಹೇಳೀತು.

ಕೊನೆಗೂ ಈ ಪ್ರಶ್ನೆ ಉಳಿದೇ ಉಳಿಯುತ್ತದೆ. ನಮ್ಮ ಸ್ವಾತಂತ್ರ ಚಳುವಳಿಯ ಇಬ್ಬರು ಮಹಾನ್ ನಾಯಕರುಗಳು- ಮಹಾತ್ಮಾಗಾಂಧಿ ಮತ್ತು ನೆಹರೂ- ತಮ್ಮ ಜೀವನಾಕಾಂಕ್ಷೆಗಳನ್ನು ಪೂರೈಸದೆ ಸಾಯುವ ಪರಿಸ್ಥಿತಿ ಬಂದದ್ದು ಏಕೆ? ಹಿಂದೂ-ಮುಸ್ಲಿಂ ಐಕ್ಯತೆಯ ಆಧಾರದ ಮೇಲೆ ಭಾರತದ ಐಕ್ಯತೆ ಗಾಂಧಿಯ ಒಂದು ಪ್ರಮುಖ ಜೀವನಾಕಾಂಕ್ಷೆಯಾಗಿತ್ತು. ನೆಹರೂಗೆ ಸ್ವತಂತ್ರ ಭಾರತದಲ್ಲಿ ಅವರ ಆಡಳಿತದಲ್ಲಿ ಹೊಸ, ಪ್ರಜಾಸತ್ತಾತ್ಮಕ, ಪ್ರಗತಿಪರ ಸಮೃದ್ಧ ಭಾರತ ಕಟ್ಟಬಹುದೆಂಬ ಆಸೆ ಮತ್ತು ಬಯಕೆಯಿತ್ತು. ಈ ಇಬ್ಬರೂ ನಾಯಕರು ಬೂರ್ಜ್ವಾ ವ್ಯವಸ್ಥೆ ತನ್ನ ಅತ್ಯಂತ ಬಿಕ್ಕಟ್ಟಿನ ಅವಧಿ ಪ್ರವೇಶಿಸುತ್ತಿರುವಾಗ ಭಾರತವನ್ನು ಬೂರ್ಜ್ವಾ ಪ್ರಜಾಸತ್ತಾತ್ಮಕ ಮಾದರಿಯ ಹಾದಿಯಲ್ಲಿ ಒಯ್ಯಲು ಪ್ರಯತ್ನಿಸಿದರು.

ಅವರಿಬ್ಬರೂ ಭಾರತೀಯ ಬೂರ್ಜ್ವಾ ವರ್ಗದ ನಾಯಕರಾಗಿದ್ದರು. ಈ ಇಬ್ಬರಿಗೆ ಅವರ ಆಸೆಗಳು ನೆರವೇರದಿರಲು ಇದೇ ಕಾರಣ ಎಂದು ಹೊಳೆಯಲಿಲ್ಲ.

ಆದರೆ ಇವರಿಬ್ಬರಲ್ಲಿ ಗಾಂಧೀಜಿ ಒಂದಂಗುಲ ಎತ್ತರಕ್ಕೇ ನಿಲ್ಲುತ್ತಾರೆ. ಯಾಕೆಂದರೆ ಅವರು ತಮ್ಮ ಕನಸು ನುಚ್ಚುನೂರಾಗಿದ್ದನ್ನು ಸಾರ್ವಜನಿಕವಾಗಿ ಒಪ್ಪಿಕೊಂಡರು. ನೆಹರೂ ತಮ್ಮ ಕೊನೆಗಳಿಗೆಯವರೆಗೂ (ತಮ್ಮ ಚೀನಾ ದುಸ್ಸಾಹಸದ ಸೋಲಿನ ನಂತರವೂ) ಭಾರತ ಬಂಡವಾಳಶಾಹಿ ಮಾರ್ಗದಲ್ಲಿ ಮುಂದುವರೆಯಬಲ್ಲದು ಎಂಬ ನಂಬಿಕೆ ಇಟ್ಟುಕೊಂಡಿದ್ದರು.

ಗಾಂಧೀಜಿ ಮತ್ತು ನೆಹರೂ ಬಿಟ್ಟು ಹೋಗಿರುವ ಆಸ್ತಿ ಬಹಳಷ್ಟು ನಕಾರಾತ್ಮಕವಾದುದು. ಈ ಪರಂಪರೆಗೆ ಅಂಟಿಕೊಂಡಿರುವುದಕ್ಕಿಂತ ಇಂದಿನ ಭಾರತ ಅದನ್ನು ನಿರಾಕರಿಸಬೇಕು. ★



ಮಹಾಧಿವೇಶನದ ಕೆಂಪುದಳದ ಶಿಸ್ತಿನ ಸದಸ್ಯರು

ಗ್ರಾಮೀಣ ಉತ್ತರ ಭಾರತದತ್ತ

ಕಳೆದ ಒಂದು ವರ್ಷದಲ್ಲಿ ದೇಶದ ರಾಜಕೀಯದ ಮೇಲೆ ಗಮನಾರ್ಹ ಪರಿಣಾಮ ಬೀರುವಲ್ಲಿ ಅದರಲ್ಲೂ ವಿರೋಧ ಪಕ್ಷಗಳ ರಾಜಕೀಯದಲ್ಲಿ-ಎಡಪಕ್ಷಗಳು ಸಫಲವಾಗಿವೆ. ಮಧ್ಯಮ ಮಾರ್ಗದ ವಿರೋಧಿ ಬಣ ಎಡ ಪಕ್ಷಗಳ ಜತೆ ಸಂಬಂಧ ಇಟ್ಟುಕೊಂಡು ಬಿ.ಜೆ.ಪಿ.ಯನ್ನು ದೂರವಿಟ್ಟದ್ದು ಈ ಬೆಳವಣಿಗೆಯನ್ನು ಸ್ಪಷ್ಟವಾಗಿ ಎತ್ತಿ ತೋರಿಸುವ ರಾಜಕೀಯ ಸತ್ಯ. ಎಡ ಪಕ್ಷಗಳು ತಮ್ಮ ರಾಜಕೀಯದ ಸಫಲತೆಯನ್ನು, ಬಿ.ಜೆ.ಪಿ.ಯನ್ನು ಮಧ್ಯಮ ಮಾರ್ಗದ ವಿರೋಧಿ ಬಣದಿಂದ ಎಷ್ಟರ ಮಟ್ಟಿಗೆ ಪ್ರತ್ಯೇಕಿಸಲಾಗಿದೆ ಎಂಬುದರ ಮೇಲೆ ಅಳೆಯುತ್ತವೆ. ಈ ಅವಧಿಯಲ್ಲೇ ಮೂಖಭಂಗವಾಗದಂತೆ ಬಿ.ಜೆ.ಪಿ. ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುವ ಪ್ರಶ್ನೆಯಿಲ್ಲವಾದ್ದರಿಂದ, ತಾನು ಈ ಬಣವನ್ನು ಸೇರುವುದಿಲ್ಲ ಎಂದು ಹೇಳಿಕೊಳ್ಳುತ್ತಿದೆ ಎಂಬ ನಿಲುವು ಅಷ್ಟೇನೂ ನಿಜವಲ್ಲವಾದರೂ ಬಿ.ಜೆ.ಪಿ. ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಮುಖ್ಯ ಪಾತ್ರ ವಹಿಸುವುದನ್ನು ಬಯಸಿತ್ತು. ಮತ್ತು ಆ ರೀತಿ ಮಾಡಲು ಸಾಧ್ಯವಾಗಿಲ್ಲವೆನ್ನುವುದಂತೂ ನಿಜ.

ಮಧ್ಯಮ ಮಾರ್ಗದ ವಿರೋಧ ಪಕ್ಷಗಳು ಬಿ.ಜೆ.ಪಿ.ಯು ಇಡೀ ದೇಶದಲ್ಲಿ ಹಿಂದೂ ಮತಗಳನ್ನು ಅಣಿನೆರೆಸುವಲ್ಲಿ ಸಹಾಯಕವಾದೀತು ಎಂಬ ನಿಲುವು ಹೊಂದಿದ್ದವು. ಎಡ ಪಕ್ಷಗಳು ಅದರಲ್ಲೂ ಎರಡು ಕಮ್ಯೂನಿಸ್ಟ್ ಪಕ್ಷಗಳು ಈ ನಿಲುವಿನ ಮೇಲೆ ತಮ್ಮ ಮುಖ್ಯ ದಾಳಿಯನ್ನು ಕೇಂದ್ರೀಕರಿಸಿದ್ದವು. ಹಿಂದೂ ಕೋಮುವಾದದ ಪುನರುತ್ಥಾನದಿಂದ ಲಾಭ ಪಡೆಯುವುದು ಕಾಂಗ್ರೆಸ್(ಐ) ವಿರೋಧಪಕ್ಷಗಳಲ್ಲ. ಅದಕ್ಕೆ ಬದಲಾಗಿ ಬಿ.ಜೆ.ಪಿ. ಅದರ ಜತೆ ತರುವ ಹಿಂದೂ ಕೋಮುವಾದ, ಅಲ್ಪಸಂಖ್ಯಾತ ಕೋಮುಗಳ ಮತ ನಷ್ಟವಾಗುವಂತೆ ಮಾಡುತ್ತವೆ. ಎಡಪಕ್ಷಗಳ ಈ ವಾದದಿಂದಲೇ ಅವರಿಗೆ ಸಮಾಧಾನವಾಯಿತು ಎಂತಲ್ಲ ಇದು ರಾಜಕೀಯ ಸತ್ಯ ಎಂದು ಅವರೇ ಕಂಡುಕೊಂಡಿದ್ದಾರೆ. ಮಧ್ಯಮ ವರ್ಗದ ವಿರೋಧ ಪಕ್ಷಗಳ ಬೆಂಬಲಿಗರಾದ ಮುಖ್ಯವಾಗಿ ಗ್ರಾಮೀಣ ಜನಸಮೂಹ ನಗರದ ವರ್ತಕರ ಪಕ್ಷವಾದ ಬಿ.ಜೆ.ಪಿ. ಬಗ್ಗೆ ಸ್ವಾಭಾವಿಕವಾಗಿಯೇ ಒಳ್ಳೆಯ ಭಾವನೆ ಇಟ್ಟುಕೊಂಡಿಲ್ಲ. ಇದೂ ಈ ಪಕ್ಷಗಳ ನಿಲುವು ಬದಲಾಗಲು ಕಾರಣವಾಗಿರಬಹುದು.

ಬಿ.ಜೆ.ಪಿ. ವಿರೋಧಿ ಒಕ್ಕೂಟದಿಂದ ಹೊರಕ್ಕೆ

ಇದರ ಒಟ್ಟು ಪರಿಣಾಮವೆಂದರೆ ಜನತಾದಳ ಮತ್ತು ರಾಷ್ಟ್ರೀಯರಂಗಗಳೆರಡರಿಂದಲೂ ಬಿ.ಜೆ.ಪಿ.ಯನ್ನು ಹೊರಗಿಡಲಾಗಿದೆ. ಜನತಾದಳಕ್ಕೆ ಸೇರಲು ತನಗೆ ಆಸಕ್ತಿ ಇಲ್ಲವೆಂದು ಬಿ.ಜೆ.ಪಿ. ಹೇಳಿಕೊಳ್ಳುತ್ತಿದ್ದರೂ ರಾಷ್ಟ್ರೀಯರಂಗದ ಭಾಗವಾಗಲು ಆ ಪಕ್ಷಕ್ಕೆ ಆಸಕ್ತಿ ಇತ್ತು. ಈ ಎರಡೂ ವಿರೋಧ ಪಕ್ಷಗಳ ಜತೆ ಮೈತ್ರಿಕೂಟಗಳು ಎಡಪಕ್ಷಗಳು ಮತ್ತು ಬಿ.ಜೆ.ಪಿ.ಗಳ ಜತೆ ಸ್ವತಂತ್ರವಾಗಿ ಸೀಟು ಹೊಂದಾಣಿಕೆ ಮಾಡುವ ಧೋರಣೆ ಹೊಂದಿವೆ. ಪಾರ್ಲಿಮೆಂಟಿನ ಹೊರಗಡೆ ಮತ್ತು ಒಳಗಡೆ ವಿಶಿಷ್ಟ ಪ್ರಶ್ನೆಗಳ ಮೇಲೆ ಜಂಟಿ ಹೋರಾಟ ನಡೆಸಲು ಯೋಜಿಸಿವೆ. ಆದರೆ ಬಿ.ಜೆ.ಪಿ.ಯನ್ನು ಮುಖ್ಯವಿರೋಧಿ ಮೈತ್ರಿಕೂಟದಿಂದ ಹೊರಗಿಡುವ ಎಡಪಕ್ಷಗಳ ಹೋರಾಟಕ್ಕೆ ಜಯಲಭಿಸಿದೆ ಎನ್ನಬೇಕು.

ಈ ಜಯಕ್ಕೆ ಕಾರಣಗಳಿವೆ. ಮೊದಲನೆಯದಾಗಿ ಮೂರು ರಾಜ್ಯಗಳಲ್ಲಿ ಎಡಪಕ್ಷಗಳ ಪ್ರಾಬಲ್ಯ ಮತ್ತು ಎರಡು ರಾಜ್ಯಗಳಲ್ಲಿ ನಡೆಸುತ್ತಿರುವ ಸರ್ಕಾರಗಳು. ಎರಡನೆಯದಾಗಿ ಎಡ ಪಕ್ಷಗಳ ನೇತೃತ್ವದಲ್ಲಿ ನಡೆದ ಸಾಮೂಹಿಕ ಹೋರಾಟಗಳು ಮತ್ತು ಅದಕ್ಕೆ ದೊರೆತ ಜನರ ಮನ್ನಣೆ. ಇದರಲ್ಲಿ ಡಿಸೆಂಬರ್ ದೆಹಲಿರ್‍ಯಾಲಿ, ಮಾರ್ಚ್ 15 ಭಾರತ ಬಂದ್, ಸೆಪ್ಟೆಂಬರ್‌ನಲ್ಲಿ ರೈತ ಕೃಷಿ ಕಾರ್ಮಿಕರ ಚಳುವಳಿಗಳು ಗಮನಾರ್ಹ. ಈ ಎಲ್ಲಾ ಜನ ಹೋರಾಟಗಳಲ್ಲಿ ಎಡಪಕ್ಷಗಳು ಹಿಂದೆ ದುರ್ಬಲವಾಗಿವೆ

ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನ ಮತ್ತು ಸಿ.ಪಿ.ಐ.ನ 14ನೇ ಮಹಾಧಿವೇಶನದ ಸಂದರ್ಭದಲ್ಲಿ ದೇಶದ ರಾಜಕೀಯದಲ್ಲಿ ಎಡಪಕ್ಷಗಳ ಪಾತ್ರದ ಬಗ್ಗೆ ಪತ್ರಿಕೆಗಳು ಹೆಚ್ಚುಹೆಚ್ಚಾಗಿ ಗಮನಹರಿಸುತ್ತಿವೆ. ಈ ಎರಡೂ ಪಕ್ಷಗಳ ಪ್ರಸ್ತುತ ರಾಜಕೀಯ ಕಾರ್ಯವಿಧಾನ ಮತ್ತು ಕಾರ್ಯತಂತ್ರಗಳನ್ನು ವಿಶ್ಲೇಷಿಸಲಾಗುತ್ತಿದೆ. ಇಂತಹ ವಿಶ್ಲೇಷಣೆ ಫ್ರಂಟ್‌ಲೈನ್‌ನಲ್ಲಿ ಕೇಶವ ಮೆನನ್ ಮಾಡಿದ್ದಾರೆ. ಇದರ ಸಾರಾಂಶ ಕೆಳಗೆ ಕೊಡಲಾಗಿದೆ. ಈ ಲೇಖನದಲ್ಲಿ ಮಾಡಿರುವ ವಿಶ್ಲೇಷಣೆ ಎಲ್ಲಾ ಎಡದೃಷ್ಟಿಯಿಂದ ಸರಿ ಇದೆ ಎಂದೇನಲ್ಲ, ಆದರೆ ದೇಶದ ರಾಜಕೀಯದಲ್ಲಿ ಎಡಪಕ್ಷಗಳ ಗಮನಾರ್ಹ ಪ್ರಭಾವವನ್ನು ಇಲ್ಲಿ ಗ್ರಹಿಸಲಾಗಿದೆ.

ಎನ್ನಲಾದ ಹಿಂದೀ ಪ್ರದೇಶಗಳಲ್ಲಿ ದೊರೆತ ಜನರ ಮನ್ನಣೆ ವಿರೋಧ ಪಕ್ಷಗಳ ಮೇಲೆ ಪರಿಣಾಮಬೀರದೆ ಇರಲು ಸಾಧ್ಯವಿರಲಿಲ್ಲ.

ಜನತಾ ದಳ ಮತ್ತು ರಾಷ್ಟ್ರೀಯ ರಂಗದ ಕಾರ್ಯಕ್ರಮಗಳ ಮೇಲೆ ಎಡ ಪಕ್ಷಗಳು ಬಹಳ ಪರಿಣಾಮ ಬೀರಿವೆ ಎಂದು ಹೇಳಲಾಗದು. ಅವುಗಳು ಅಂಗೀಕರಿಸುವ ಕಾರ್ಯಕ್ರಮಗಳು ನಾಯಕತ್ವ ಮತ್ತು ಅದರ ಬೆಂಬಲಿಗರಿಗೆ ಒಪ್ಪಿಗೆಯಾಗಿರುವುವು. ಈ ವಿರೋಧ ಒಕ್ಕೂಟ ತಮ್ಮ ನಡುವೆ ಧೋರಣೆಗಳ ಬಗ್ಗೆ ವ್ಯತ್ಯಾಸಗಳಿರುವ ಬಗ್ಗೆ ಎಡಪಕ್ಷಗಳಿಗೆ ಪೂರ್ಣ ಅರಿವಿದೆ. ಇದನ್ನು ಎರಡೂ ಎಡ ಪಕ್ಷಗಳು ಸ್ಪಷ್ಟವಾಗಿ ಹೇಳಿವೆ ಕೂಡ. ಕೋಮುವಾದಿ ಶಕ್ತಿಗಳನ್ನು ಪ್ರತ್ಯೇಕಿಸುವಲ್ಲಿ, ರಾಜೀವ್ ಸರ್ಕಾರದ ಉದಾರವಾದಿ ಆರ್ಥಿಕ ನೀತಿಗಳನ್ನು ವಿರೋಧಿಸುವಲ್ಲಿ, ಸಾಮ್ರಾಜ್ಯಶಾಹಿ ವಿರೋಧಿ ಅಲಿಪ್ತ ನೀತಿಯನ್ನು ಎತ್ತಿ ಹಿಡಿಯುವಲ್ಲಿ, ದುರ್ಬಲ ವರ್ಗದ ಪರವಾದ ಭೂಸುಧಾರಣೆಗೆ ಪರವಾಗಿ ಹೋರಾಡುವಲ್ಲಿ, ಪ್ರಾದೇಶಿಕ ಪಕ್ಷಗಳ ಕೆಲವು ಸಂಕೂಚಿತ ನಿಲುವುಗಳ ವಿರುದ್ಧ ಹೋರಾಡುವಲ್ಲಿ ನಿರ್ಲಕ್ಷ್ಯತೆ ತೋರಿಸುವ ಬಗ್ಗೆ ಎಡ ಪಕ್ಷಗಳು ಸಾರ್ವಜನಿಕವಾಗಿ ಈ ಪಕ್ಷಗಳನ್ನು ಟೀಕಿಸಿವೆ.

ಜನತಾದಳ ಮಾತ್ರ ಸ್ವಲ್ಪಮಟ್ಟಿಗೆ ಈ ಬಗ್ಗೆ ಕಳಕಳಿ ತೋರಿಸಿರುವುದರಿಂದ ಈ ಪಕ್ಷದ ಬಗ್ಗೆ ಎಡ ಪಕ್ಷಗಳು ಹೆಚ್ಚು ಒಲವು ತೋರಿಸಿವೆ. ಇದಕ್ಕೆ ಹಿಂದೀ ಪ್ರದೇಶದಲ್ಲಿ ಜನತಾದಳ ಪ್ರತಿನಿಧಿಸುವ ಜನ ವಿಭಾಗಗಳೂ ಕಾರಣ. ಕಮ್ಯೂನಿಸ್ಟ್ ಪಕ್ಷಗಳು, ಕೊಟ್ಟ ಕೊನೆಯದಾಗಿ ಈ ಜನ ವಿಭಾಗಗಳನ್ನು- ಅದರಲ್ಲೂ ಗ್ರಾಮೀಣ ಬಡಜನರ ರೈತ ಕಾರ್ಮಿಕರನ್ನು-ಗೆದ್ದುಕೊಳ್ಳುವ ಉದ್ದೇಶ ಹೊಂದಿವೆ. ಆದರೆ ಹಿಂದೀ ಪ್ರದೇಶಗಳಲ್ಲಿ ಎಡ ಪಕ್ಷಗಳ ದುರ್ಬಲ ಸಂಘಟನಾತ್ಮಕ ಶಕ್ತಿಯಿಂದಾಗಿ ಈ ಜನ ವಿಭಾಗಗಳನ್ನು ಸದ್ಯಕ್ಕೆ ಮುಟ್ಟಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಜನ ವಿಭಾಗಗಳ ಮೇಲೆ ಹತೋಟಿ ಹೊಂದಿರುವ, ಬೆಂಬಲ ಪಡೆದಿರುವ ರಾಜಕೀಯ ಶಕ್ತಿಗಳ ಜತೆ ಸಹಕಾರದ ನೀತಿ ಈ ಪರಿಸ್ಥಿತಿಯ ತಾರ್ಕಿಕ ಪರಿಣಾಮ.

ಗ್ರಾಮೀಣ ಉತ್ತರ ಭಾರತದತ್ತ

ಈ ಜನ ವಿಭಾಗಗಳನ್ನು ಮುಟ್ಟಲು ಎಡಪಕ್ಷಗಳಿಗೆ ಹಲವು ಎಡರು ತೊಡರುಗಳಿವೆ. "ಗ್ರಾಮೀಣ ಹಿತಾಸಕ್ತಿ"ಗಳಿಗೆ ನಡೆದಿರುವ ಹೋರಾಟಗಳು (ಉದಾ: ಟಿಕಾಯತ್‌ರ ನಾಯಕತ್ವದ ರೈತ ಹೋರಾಟ) ಈ ಪ್ರದೇಶದ ರಾಜಕೀಯವನ್ನೇ ಬದಲಾಯಿಸಿವೆ. ಎಲ್ಲಾ ರೈತಾಪಿ ವಿಭಾಗಗಳ (ಸಣ್ಣ, ಮಧ್ಯಮ ಇತ್ಯಾದಿ) ಮತ್ತು ಕೃಷಿ ಕಾರ್ಮಿಕರು ಭೂಮಾಲೀಕ ಮತ್ತು ಬಂಡವಾಳಶಾಹಿ ರೈತರ ಜತೆ ಸಾಂಪ್ರದಾಯಿಕ ಆದರೆ ಗಹನ ಸಂಬಂಧಗಳನ್ನು ಹೊಂದಿದ್ದಾರೆ. ಸಾಮಾಜಿಕ ಸುಧಾರಣಾ ಚಳುವಳಿಗಳ ಅಭಾವದಿಂದ ಹಿಂದೀ ಪ್ರದೇಶಗಳಲ್ಲಿ ಜಾತಿ ವಿಭಾಗಗಳು ವರ್ಗ ವಿಭಾಗಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಗ್ರಾಮೀಣ ಶ್ರೀಮಂತರು ತಮ್ಮ ಹಾಗೂ ಕೆಲವು ಸಾಮಾನ್ಯ ಬೇಡಿಕೆಗಳ ಸುತ್ತ ಇಡೀ ಗ್ರಾಮೀಣ ಜನತೆಯನ್ನು ಅಣಿನೆರೆಸಬಲ್ಲರು (ಉದಾ: ಲಾಭದಾಯಕ ಬೆಲೆಗಳು, ಬ್ಯಾಂಕ್ ಮತ್ತು ಸಹಕಾರಿ ಸಾಲಗಳ ಮನ್ನಾ.) ಇದರಿಂದ ಈ ಶ್ರೀಮಂತ ವರ್ಗಗಳಿಗೆ ಜಾಸ್ತಿ ರಾಜಕೀಯ ಶಕ್ತಿ ಬಂದಿದೆ. ಇದರ ಬಲದಿಂದ ಕೃಷಿ ಸಂಬಂಧಗಳಲ್ಲಿ ಸುಧಾರಣೆ, ಬದಲಾವಣೆಗೆ ತಡೆಯೊಡ್ಡಲು ಸಾಧ್ಯವಾಗಿದೆ. ಆದರೆ ಈ ಬದಲಾವಣೆಗಳು ನೇರ ಹೋರಾಟಗಳಲ್ಲಿ ಪರ್ಯಾವಸಾನಗೊಂಡಿದ್ದರೂ ಚುನಾವಣಾ ರಾಜಕೀಯದಲ್ಲಿ ಹೆಚ್ಚಿನ ಪರಿಣಾಮ ಬೀರಿಲ್ಲ.

ಮಧ್ಯಮ ಮಾರ್ಗದ ವಿರೋಧ ಪಕ್ಷಗಳ 'ಇಮೇಜ್' ಇರುವುದು ಉಚ್ಚ ಪ್ರಬಲ ಜಾತಿಗಳದ್ದು ಎಂದು. ಇದು ಹರಿಜನ ಗಿರಿಜನ, ಆದಿವಾಸಿ ಮತ್ತಿತರ ಅಲ್ಪಸಂಖ್ಯಾತರು ತಮ್ಮ ಪ್ರತ್ಯೇಕ ಸಂಘಟನೆಗಳತ್ತ ಹೋಗುವ ಪರಿಸ್ಥಿತಿ ಸೃಷ್ಟಿಸಬಲ್ಲದು. ಆದ್ದರಿಂದ ಗ್ರಾಮೀಣ ದುಡಿಯುವ ಜನ ವಿಭಾಗಗಳನ್ನು ಅಣಿ

ಪುಟ 8 ಕ್ಕೆ

ವಜಾ ವಿರುದ್ಧ ಕಾಲ್ನಡೆ ಜಾಥಾ

ಪುತ್ತೂರು ತಾಲ್ಲೂಕಿನ ಬಿಳಿನೆಲೆಯಲ್ಲಿರುವ ಕೇಂದ್ರ ಪ್ಲಾಂಟೇಶನ್ ಬೆಳೆಗಳ ಸಂಶೋಧನಾ ಕೇಂದ್ರದ 27 ಮಂದಿ ಕಾರ್ಮಿಕರನ್ನು ವಿನಾ ಕಾರಣ ಕೆಲಸದಿಂದ ವಜಾ ಮಾಡಿರುವುದನ್ನು ಪ್ರತಿಭಟಿಸಿ, ಡಿಸೆಂಬರ್ 13ರಂದು ಪ್ಲೈವುಡ್, ಕೊಕ್ಕೋ ತೋಟಕಾರ್ಮಿಕರು, ರೈತ ಕಾರ್ಮಿಕರ ನ್ನೊಳಗೊಂಡು ಮೆರವಣಿಗೆ ನಡೆಸಿ ಸಂಸ್ಥೆಯ ಗೇಟ್ ಮುಂದೆ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಸಿ.ಐ.ಟಿ.ಯು. ಜಿಲ್ಲಾ ಅಧ್ಯಕ್ಷ ಕಾ॥ ಎ. ಮೊಸಬ್ಬರವರು ಮಾತನಾಡಿ ಕೇಂದ್ರ ಸರ್ಕಾರದ ಈ ಉದ್ಯಮ ಕಾರ್ಮಿಕ ಕಾಯ್ದೆಗಳನ್ನು ಉಲ್ಲಂಘಿಸುತ್ತಿರುವುದನ್ನು ಖಂಡಿಸಿದರು. 7-8 ವರ್ಷಗಳಿಂದ ದುಡಿದ ಕಾರ್ಮಿಕರನ್ನು ವಜಾ ಮಾಡಿರುವ ಕ್ರಮವನ್ನು ಕಾ॥ ಸೂರ್ಯನಾರಾಯಣಭಟ್ ಖಂಡಿಸಿದರು ಕೆಲಸಗಾರರನ್ನು ವಜಾ ಮಾಡಿರುವುದನ್ನು ರದ್ದುಗೊಳಿಸಿ ಕೆಲಸ ನೀಡದಿದ್ದರೆ ಕಾಸರಗೋಡಿನಲ್ಲಿರುವ ಸಂಸ್ಥೆಯ ಕೇಂದ್ರ ಕಛೇರಿಗೆ ಕಾಲ್ನಡಿಗೆ ಜಾಥಾ ನಡೆಸಲು ನಿರ್ಧರಿಸಲಾಯಿತು. ಕಾ॥ ಮೋನಪ್ಪಗೌಡ ಸಭೆಯಲ್ಲಿ ಮಾತನಾಡಿದರು.

ಕಾರ್ಮಿಕ ಚಳುವಳಿಗಳು

ಹಪ್ಪಿ ಕೋಲಿಗೆ ಹರಿಹರದಲ್ಲಿ ಪ್ರತಿಭಟನೆ

ರಂಗಭೂಮಿ ಕಲಾವಿದ ಸಪ್ಪರ್ ಹಷ್ಮಿ ಕೊಲೆ ಪ್ರತಿಭಟಿಸಿ ಹರಿಹರದ ಸಮುದಾಯ, ಬಂಡಾಯ ಸಾಹಿತ್ಯ ಸಂಘಟನೆ, ವಿಜ್ಞಾನ ಪರಿಷತ್ ಮತ್ತು ಸಿ.ಐ.ಟಿ.ಯು.ವಿನ ವಿವಿಧ ಕಾರ್ಮಿಕ ಸಂಘಗಳು ಜಂಟಿಯಾಗಿ ಮೆರವಣಿಗೆ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ಅರ್ಪಿಸಿದರು. ಅಪರಾಧಿಗಳನ್ನು ಕೂಡಲೇ ಬಂಧಿಸಿ ಉಗ್ರಶಿಕ್ಷೆ ವಿಧಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಕಾ॥ ವಿ.ಜೆ.ಕೆ.ನಾಯರ್‌ರವರು ವಹಿಸಿದ್ದರು. ಬಂಡಾಯಸಾಹಿತಿ ಪ್ರೊ॥ಸಿ.ವಿ.ಪಾಟೀಲ, ಕರ್ನಾಟಕ ವಿಜ್ಞಾನ ಪರಿಷತ್‌ನ ಕೆ.ಎಂ.ಕೊಟ್ರಯ್ಯ ಸಮುದಾಯದ ಅಣ್ಣಪ್ಪ, ಪಾಲಿಫೈಬರ್ಸ್ ಕಾರ್ಮಿಕ ಸಂಘದ ಧ್ರುವಕುಮಾರ್ ಇನಾಂದಾರ್ ಮತ್ತು ಕಿರ್ಲೋಸ್ಕರ್ ಕಾರ್ಮಿಕ ಸಂಘದ ನಿತ್ಯಾನಂದಸ್ವಾಮಿ ಮಾತನಾಡಿದರು.

ಕಂಟ್ರಾಕ್ಟ್ ಪದ್ಧತಿ ರದ್ದಿಗೆ ಒತ್ತಾಯ

ಬೀಡಿ ಉದ್ಯಮದಲ್ಲಿ ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸಿ ಬೀಡಿ ಕಾರ್ಮಿಕರ ಶೋಷಣೆಯನ್ನು ಕೊನೆಗಾಣಿಸಲು ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಸವಲತ್ತು ಒದಗಿಸದ ಸರ್ಕಾರದ ನಿರ್ಲಕ್ಷ್ಯತನವನ್ನು ಬೀಡಿ ಕಾರ್ಮಿಕರು ಸಂಘಟಿತ ಹೋರಾಟದ ಮೂಲಕ ಹಿಮ್ಮೆಟಿಸಬೇಕೆಂದು ಸಿ.ಐ.ಟಿ.ಯು. ದ.ಕ. ಜಿಲ್ಲಾ ಅಧ್ಯಕ್ಷ ಕಾ॥ ಕೆ.ಮೊಸಬ್ಬರವರು ಕರೆ ನೀಡಿದರು. ಅವರು ಡಿಸೆಂಬರ್ 26 ರಂದು ಬಂಟ್ವಾಳದ ಜನರಲ್ ವರ್ಕರ್ಸ್ ಯೂನಿಯನ್ ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ನಾಯಕ ಕಾ॥ ಬಿ.ವಾಸುಗಟ್ಟಿಯವರು ವಹಿಸಿದ್ದರು.

ಬಸ್ ಸೌಕರ್ಯಕ್ಕಾಗಿ ರಸ್ತೆ ತಡೆ ಚಳುವಳಿ

ಗುಲ್ಬರ್ಗಾ ಜಿಲ್ಲೆ ಆಳಂದಾ ತಾಲ್ಲೂಕು ಕೇರಿ ಅಂಬಲಗ ಗ್ರಾಮಕ್ಕೆ ಸಿಟಿ ಬಸ್ ರದ್ದುಗೊಳಿಸಿದ್ದನ್ನು ಪ್ರತಿಭಟಿಸಿ ರೈತ ಸಂಘದ ಕಾರ್ಯಕರ್ತರು 22 ಎತ್ತಿನಗಾಡಿ ಟ್ರಾಕ್ಟರ್ ಹಾಗೂ ಪಾದಯಾತ್ರೆಯಲ್ಲಿ, ಸಾವಿರಾರು ಸಂಖ್ಯೆಯಲ್ಲಿ ನೆರೆದು ಜಂಬಗ ಕ್ರಾಸ್ ಬಳಿ ಬೆಳಿಗ್ಗೆ 7 ಗಂಟೆಯಿಂದ 10ಗಂಟೆವರೆಗೆ ರಸ್ತೆ ರೋಕೋ ಚಳುವಳಿ ನಡೆಸಿದರು. ಗುಲ್ಬರ್ಗಾದವರೆಗೆ ಜಾಥಾ ನಡೆಸಲಾಯಿತು. ಸಬ್‌ಇನ್ಸ್‌ಪೆಕ್ಟರ್ ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಸಾರಿಗೆ ಅಧಿಕಾರಿಗಳೊಂದಿಗೆ ತ್ರಿಪಕ್ಷೀಯ ಮಾತುಕತೆ ನಡೆದು ಎಂದಿನಂತೆ ಬಸ್ ಸೌಲಭ್ಯ ನೀಡುವುದಾಗಿ ಸಾರಿಗೆ ಅಧಿಕಾರಿಗಳು ಭರವಸೆ ನೀಡಿದರು. ನಂತರ ನಡೆದ ರೈತರ ಸಭೆಯನ್ನುದ್ದೇಶಿಸಿ ಜಿಲ್ಲಾಪರಿಷತ್ ಸದಸ್ಯ ಹಾಗೂ ಸಿ.ಪಿ.ಐ.(ಎಂ) ನಾಯಕ ಮಾರುತಿ ಮಾನ್ಪಡೆ, ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾ॥ ಅರುಣಕುಮಾರ್ ಹಾಗೂ ಸ್ಥಳೀಯ ಮುಖಂಡರು ಮಾತನಾಡಿದರು.

ಕೃಷಿ ಕೂಲಿಗಾರರ ಸಭೆ

ಉಡುಪಿ ತಾಲ್ಲೂಕಿನ ಪಡುಬಿದ್ರಿ ಸುತ್ತಮುತ್ತಲಿನ ಕೃಷಿ ಕೂಲಿಗಾರರ ಸಭೆ ಜನವರಿ 18ರಂದು ಕಾ॥ ಪೂವಪ್ಪ ಕೋಟಿಯಾನರ ಅಧ್ಯಕ್ಷತೆಯಲ್ಲಿ ಜರುಗಿತು.

ಗ್ರಾಮಾಂತರ ಪ್ರದೇಶದಲ್ಲಿ ರೈತ ಕೃಷಿ ಕೂಲಿಗಾರರ ಬದುಕು ಸಂಕಷ್ಟಕ್ಕೊಳಗಾಗಿದ್ದು ಸ್ವಾತಂತ್ರ್ಯ ದೊರೆತು 42 ವರ್ಷಗಳು ಗತಿಸಿದರೂ ಕನಿಷ್ಠ ಕೂಲಿಯ ಶಾಸನ ಜಾರಿಗೊಳಿಸದಿರುವುದನ್ನು ಖಂಡಿಸಿ ಕೇಂದ್ರ ಸರ್ಕಾರ ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಶಾಸನ ತರಬೇಕೆಂದು ಒತ್ತಾಯಿಸಲಾಯಿತು. ಪ್ರಗತಿಪರ ಭೂಸುಧಾರಣೆ ಜಾರಿಗೊಳಿಸುವಲ್ಲಿ, ಜನತೆಯ ಕೊಳ್ಳುವ ಶಕ್ತಿ ದಿನೇದಿನೇ ಕುಸಿಯುತ್ತಿರುವುದನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಸಂಘಟಿತರಾಗಿ ಹೋರಾಟ ನಡೆಸಲು ರೈತಸಂಘದ ತಾಲ್ಲೂಕು ಅಧ್ಯಕ್ಷ ಕಾ॥ ಡೇವಿಡ್ ಕರ್ಕಡ ಕರೆ ನೀಡಿದರು. ಪೂವಪ್ಪ ಕೋಟಿಯಾನ್, ಸುನಂದ ಮತ್ತು ಅಪ್ಪಣ್ಣ ಮಾತನಾಡಿದರು.

ಕಾಪು ರೈತರ ಸಭೆ

ಉಡುಪಿಯ ಕಾಪುವಿನಲ್ಲಿ ರೈತರ ಸಭೆ ಜನವರಿ 15 ರಂದು ಗುದ್ದಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಮ ಕೆ.ಕುಂದ, ಕಾ॥ ಡೇವಿಡ್ ಎ.ಕರ್ಕಡರವರು ಮಾತನಾಡಿದರು. ಕಾಪು ಎಸಂಬ್ಲಿ ಕ್ಷೇತ್ರದ ಸಮಿತಿಗೆ ಶ್ರೀ ಗುದ್ದಪೂಜಾರಿ (ಅಧ್ಯಕ್ಷ) ರಾಮಕುಂದರ್ (ಕಾರ್ಯದರ್ಶಿ) ವಾಮನಪೂಜಾರಿ ಕೋಶಾಧಿಕಾರಿಯಾಗಿರುವ 9ಜನರ ಸಮಿತಿ ಆರಿಸಲಾಯಿತು.

ದುರ್ಬಲರಿಗೆ ನೀಡಿದ್ದು ಪ್ರಬಲರಿಗೆ

ಮಲಪನಗುಡಿ ಮಂಡಲ ವ್ಯಾಪ್ತಿಯ ದೀನದಲಿತರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ತಲುಪಬೇಕಾಗಿರುವ ಸೌಲಭ್ಯಗಳು ತಲುಪದೇ ಇಲ್ಲಿಯ ಜಿಲ್ಲಾಪರಿಷತ್, ಮಂಡಲ್‌ಪ್ರಧಾನ, ಸದಸ್ಯರ ಹಿಂಬಾಲಕರಿಗೆ ಹುಡ್ಕೋ ಮನೆ, ಜನತಾ ಮನೆಗಳನ್ನು ಮಂಜೂರು ಮಾಡುತ್ತಿರುವ ಮಲಪನಗುಡಿಯ ಮಂಡಲ್‌ನ ಪಕ್ಷಪಾತದಿಂದ ನಿಜವಾಗಿ ಸೌಲಭ್ಯ ದೊರಕಬೇಕಾದವರಿಗೆ ವಂಚನೆಯಾಗುತ್ತಿದೆ ಎಂದು ಪಕ್ಷ ಆರೋಪಿಸಿದೆ. ಈ ಕುರಿತು ವಿಚಾರಣೆ ನಡೆಸಿ ಈ ಅವ್ಯವಹಾರ ತಪ್ಪಿಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಶಾಖೆ ಕಾರ್ಯದರ್ಶಿ ಕಾ॥ ಪಾಂಡುರವರು ಸಂಬಂಧಿಸಿದ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಸೈಯದ್ ಇಬ್ರಾಹಿಂ ಸಾಹೇಬ್ ನಿಧನಕ್ಕೆ ಸಂತಾಪ

ಬಂಟ್ವಾಳದಲ್ಲಿ ಪಕ್ಷದ ಸದಸ್ಯರಾಗಿ ಹಲವಾರು ಹೋರಾಟಗಳಲ್ಲಿ ಸಕ್ರಿಯ ಪಾತ್ರ ವಹಿಸಿದ ಕಾ॥ ಸೈಯದ್ ಇಬ್ರಾಹಿಂ ಸಾಹೇಬ್‌ರವರು ದೀರ್ಘ ಕಾಯಿಲೆಯಿಂದ ಅಸ್ವಸ್ಥರಾಗಿ ಡಿಸೆಂಬರ್ 17ರಂದು ನಿಧನರಾದರು. ಪಕ್ಷ 1964ರಲ್ಲಿ ಇಬ್ಭಾಗವಾದಾಗ ಪಕ್ಷದೊಡನೆ ನಿಂತು ನಿಷ್ಠಾವಂತರಾಗಿ ದುಡಿದ ಕಾ॥ ಸೈಯದ್‌ರ ನಿಧನಕ್ಕೆ ತೀವ್ರ ದುಃಖ ವ್ಯಕ್ತಪಡಿಸಿದೆ.

ನಾಗರೀಕ ಸೌಲಭ್ಯಕ್ಕಾಗಿ ಧರಣಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿರಸಿ ಶಾಖೆಯು ಶಿರಸಿಯ ಜನತೆಯನ್ನು ಬಾಧಿಸುತ್ತಿರುವ ಹಲವಾರು ನಾಗರೀಕ ಸಮಸ್ಯೆಗಳನ್ನು ಮುಂದಿರಿಸಿ ಡಿಸೆಂಬರ್ 29ರಂದು ಪುರಸಭೆಯ ಎದುರು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ಧರಣಿ ಸತ್ಯಾಗ್ರಹವನ್ನು ಸಂಘಟಿಸಿತು. ಕೈಗಾ ಅಣುಸ್ಥಾವರ ಸ್ಥಾಪಿಸಬೇಕು. ಹಸಿರುಕಾರ್ಡು ಒದಗಿಸಿ, ಹೆಚ್ಚು ಆಹಾರ ಧಾನ್ಯ ನೀಡಬೇಕು. ಬಸ್ ನಿಲ್ದಾಣದ ದುರಸ್ತಿ, ಪುರಸಭೆಗೆ ಚುನಾವಣೆ, ಪುರಸಭೆಯ ಕೌನ್ಸಿಲರ್‌ಗಳ ಅವ್ಯವಹಾರಗಳ ಕುರಿತು ತನಿಖೆ, ಪುರಸಭಾಧ್ಯಕ್ಷ-ಉಪಾಧ್ಯಕ್ಷರನ್ನು ಕೂಡಲೇ ವಜಾಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳಿಗಾಗಿ ನಡೆದ ಧರಣಿಯ ನೇತೃತ್ವವನ್ನು ಶಾಖೆಯ ಕಾರ್ಯದರ್ಶಿ ಕಾ॥ ಪಿ.ಜೆ. ಮಶಾಲ್ದಿ ಹಾಗೂ ಉ.ಕ.ಜಿಲ್ಲಾ ಸಮಿತಿ ಸದಸ್ಯ ಕಾ॥ ಎಂ.ಎಸ್.ಧಾರೇಶ್ವರರವರು ವಹಿಸಿದ್ದರು.

ನೇಯ್ಗೆ ಕೆಲಸಗಾರರ 12ನೇ ಮಹಾಸಭೆ

ಉಡುಪಿಯ ನೇಯ್ಗೆ ಕೆಲಸಗಾರರ 12ನೇ ವಾರ್ಷಿಕ ಮಹಾಸಭೆ ಜ. 8ರಂದು ಉಡುಪಿಯ ಸರ್ಕಾರಿ ನೌಕರರ ಭವನದಲ್ಲಿ ಜರುಗಿತು. ನೇಯ್ಗೆ ಸಹಕಾರಿ ಸಂಘಗಳಲ್ಲಿ ನೇಕಾರರನ್ನು ಕಾರಣವಿಲ್ಲದೆ ವಜಾಗೊಳಿಸುವ ದಬ್ಬಾಳಿಕೆ ವಿರುದ್ಧ ಕಾನೂನು ತಿದ್ದುಪಡಿ ತರಬೇಕೆಂದು, ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ನೂತನ ಸಮಿತಿಗೆ ಕ್ರಿಸಾನಂದತೇಜಪಾಲ (ಅಧ್ಯಕ್ಷ) ಭಾಸ್ಕರ ಸೇರಿ ಗಾರ (ಉಪಾಧ್ಯಕ್ಷ) ಫ್ರೆಡ್ರಿಕ್ ಆಲ್ಬರ್ಟ್ ಸೊನ್ಸ್ (ಕಾರ್ಯದರ್ಶಿ) ರಘುಶೆಟ್ಟಿಗಾರ (ಜೊತೆ ಕಾರ್ಯದರ್ಶಿ) ಕೆ. ಸಂಜೀವಶೆಟ್ಟಿಗಾರ (ಖಜಾಂಚಿ)ಯನ್ನೊಳಗೊಂಡ 13 ಜನರ ಸಮಿತಿ ರಚಿಸಲಾಯಿತು. ಸಿ.ಐ.ಟಿ.ಯು. ನಾಯಕ ಕಾ॥ ಡೇವಿಡ್ ಎ. ಕರ್ಕಡ ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು.

ಪುಟ 2 ರಿಂದ

ಕಾರಣ ಎಡಶಕ್ತಿಗಳು, ಬೆಂಬಲಿಸುವ ರೈತ ಹಾಗೂ ಕೃಷಿ ಕೂಲಿಕಾರ ಸಂಘಟನೆಗಳು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲು ರಾಷ್ಟ್ರ ಮಟ್ಟದಲ್ಲಿ ಸಮಾವೇಶವನ್ನು ನಡೆಸಲು ತಯಾರಿ ನಡೆಸಿದೆ. ನಾವು ಈ ಕೆಳ ಹಂತದಿಂದ ಚರ್ಚೆ ನಡೆಸಿ ಸೂಚನೆಗಳನ್ನು ಕಳಿಸಬೇಕಾಗಿದೆಯೆಂದು ಉದ್ಘಾಟನೆಯನ್ನು ಮುಗಿಸಿದರು.

ಕಾ॥ ಜಿ.ವಿ.ಅಶ್ವಥ್‌ನಾರಾಯಣರೆಡ್ಡಿಯವರು ಜಿಲ್ಲಾ ಸಮಿತಿ ತಯಾರಿಸಿದ ಕರಡು ವರದಿಯನ್ನು ಮಂಡಿಸಿದರು. ಕಾ॥ ಲಕ್ಷ್ಮಯ್ಯನವರು ಅದನ್ನು ಸಮರ್ಥಿಸಿ ಮಾತನಾಡಿದರು.

ವರದಿಯ ಮೇಲೆ ಎಂಟು ಜನ ಪ್ರತಿನಿಧಿ ಸಂಗಾತಿಗಳು ಮಾತನಾಡಿದರು. ವರದಿಯಲ್ಲಿ ಕರ್ನಾಟಕ ಭೂಸುಧಾರಣೆ ಕಾಯ್ದೆಗೆ ಪ್ರಮುಖ ತಿದ್ದುಪಡಿ ಸೂಚನೆಗಳನ್ನು ಅಂಗೀಕರಿಸಲಾಯಿತು.

1. ಸ್ವಂತ ಸಾಗುವಳಿದಾರ ಎಂದರೆ, ಭೂಮಿಯ ಮಾಲೀಕನಾಗಲಿ ಅಥವಾ ಅವನ ಕುಟುಂಬದ ಸದಸ್ಯರಾಗಲಿ ಭೂಮಿಯ ಹತ್ತಿರವಿದ್ದು ಸ್ವಂತ ಸಾಗುವಳಿ ಮಾಡುತ್ತಿರಬೇಕು, ಇಲ್ಲವೆ ಅದರ ನಿರ್ವಹಣೆ ಮಾಡಿಸುತ್ತಿರಬೇಕು, ಆ ಕುಟುಂಬದ ಪ್ರಮುಖ ಆದಾಯ ಆ ಭೂಮಿಯೇ ಆಗಿರಬೇಕು.

2. ಈಗಿರುವ ಭೂಮಿ ವರ್ಗೀಕರಣ ಎ. ಬಿ. ಸಿ. ಡಿ.ಯೆಂದು ಮಾಡಿ ಹೆಚ್ಚು ಭೂಮಿಯನ್ನು ಭೂಮಾಲೀಕರು ಇಟ್ಟುಕೊಳ್ಳಲು ಅವಕಾಶವಿದೆ. ಅದನ್ನು ಎ ಮತ್ತು ಬಿ ಎಂದು ವರ್ಗೀಕರಿಸಿ. ನೀರಾವರಿ ಹಾಗೂ ಒಣ ಬೇಸಾಯವೆಂದು ಮಾಡಬೇಕು.

3. ಕುಟುಂಬದ ವ್ಯಾಖ್ಯಾನವನ್ನು ಬದಲಾಯಿಸಬೇಕು ಅದನ್ನು ಗಂಡ ಹೆಂಡತಿ, ಅಪ್ರಾಪ್ತ ವಯಸ್ಕ ಮಕ್ಕಳನ್ನು ಸೇರಿಸಿ ಐದಕ್ಕಿಂತ ಹೆಚ್ಚು ಸದಸ್ಯರಿದ್ದಲ್ಲಿ ಪ್ರಾಪ್ತ ವಯಸ್ಕ ಗಂಡು ಮಕ್ಕಳಿಗೆ ಮತ್ತೊಂದು ಯೂನಿಟ್ ಎಂದು ಪರಿಗಣಿಸದೆ ತಲಾ ಎರಡರಿಂದ ಐದು ಎಕರೆ ಕೊಡಬಹುದು. ಆದರೆ ಒಟ್ಟು ಭೂಮಿ. ಸೇರಿ 25ರಿಂದ 30. ಎಕರೆಗೆ ಮೀರಬಾರದು.

4. ಒಟ್ಟು ಕುಟುಂಬದ ಸೀಲಿಂಗ್ ಮಿತಿಯನ್ನು ಕಡಿಮೆಗೊಳಿಸಬೇಕು.

5. ಗೇಣಿದಾರರು ಅರ್ಜಿ ಹಾಕಿಕೊಳ್ಳಲು ಅವಕಾಶವನ್ನು ವಿಸ್ತರಿಸಬೇಕು, ಮಾಲೀಕತ್ವವನ್ನು ಭೂಮಿಯ ಮಾಲೀಕನೇ ರುಜುವಾತುಪಡಿಸಬೇಕು.

6. ಈಗಿರುವ ಭೂನ್ಯಾಯ ಮಂಡಳಿಗಳನ್ನು ರೈತ-ಕೃಷಿ ಕೂಲಿಕಾರ ಸಂಘಟನೆಯ ಪ್ರತಿನಿಧಿಗಳನ್ನು ಸೇರಿಸಿ ಪುನರ್ರಚಿಸಬೇಕು.

7. ಪ್ಲಾಂಟೇಶನ್, ಗಾರ್ಡನ್ ಭೂಮಿಗಳಿಗೆ ನೀಡಿರುವ ವಿನಾಯಿತಿಗಳನ್ನು ತೆಗೆದುಹಾಕಿ, 5ಎಕರೆ ಹಾಗೂ ಕಡಿಮೆಯಿರುವ ಭೂಮಿಯ ಮಾಲೀಕರಿಗೆ ಗೇಣಿ ಕೊಡಲು ವಿನಾಯಿತಿ ನೀಡಬೇಕು.

ಕೊನೆಯಲ್ಲಿ ಕಾ॥ ಚಂದ್ರಶೇಖರಬಾಳಿ ಸಮಾರೋಪ ಭಾಷಣ ಮಾಡಿದರು. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಭೂಮಿಯ ಚಳುವಳಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಜೊತೆಗೆ ಬಂದಿದ್ದು, ಒಂದು ರಾಷ್ಟ್ರದ ಪ್ರಮುಖ ಅಲೆಯಾಗಿ ಬಂದಿತ್ತು. ಆದರ

ಭೂ ಸಂಬಂಧಗಳು - ಅಸ್ತಿತ್ವ

2ನೇ ಪುಟದಿಂದ

ಪರಿಣಾಮವಾಗಿ ಲಕ್ಷಾಂತರ, ಮಿಲಿಯಾಂತರ ರೈತರು ಭೂಮಾಲೀಕ ಪದ್ಧತಿಯ ವಿರುದ್ಧ ಚಳುವಳಿಯಲ್ಲಿ ಧುಮುಕಿದರೂ ಆದಕ್ಕೆ ಎಡಶಕ್ತಿಗಳು ಹಾಗೂ ಕಿಸಾನ ಸಭಾ ನಾಯಕತ್ವ ಕೊಟ್ಟಿದ್ದವು.

ಕಾಂಗ್ರೆಸ್ ಭೂಸುಧಾರಣೆ ಪ್ರಶ್ನೆಯನ್ನು ಕೈಗೆತ್ತಿಕೊಂಡು ಕೆಲವು ಸುಧಾರಣೆಗಳನ್ನು ತರುವ ಮುಖಾಂತರ ಪಾಳೇಗಾರಿ ಸಂಬಂಧಗಳನ್ನು ಬಂಡವಾಳಶಾಹೀಕರಣಗೊಳ್ಳಿಸಿ ಭೂರಹಿತರಿಗೆ ಭೂಮಿ ಹಂಚುವಲ್ಲಿ, ಗೇಣಿದಾರನಿಗೆ ಭೂಮಿಯನ್ನು ಕಾಯಂಗೊಳಿಸುವಲ್ಲಿ ಚಾಂಪಿಯನ್ ಎಂಬ ಪ್ರಚಾರ ನಡೆಸಿ ಈಗ ಭೂಮಿಯ ಪ್ರಶ್ನೆ-ಹೆಚ್ಚುವರಿ ಭೂಮಿಯ ಪ್ರಶ್ನೆ ಮುಗಿದು ಹೋಗಿದೆ ಎಂದು ದೊಡ್ಡ ಪ್ರಚಾರ ಮಾಡಿದುದರ ಪರಿಣಾಮವಾಗಿ ಈ ಪ್ರಶ್ನೆಗೆ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲವಿಲ್ಲವೆಂಬಂತಾಗಿದೆ. ಪ.ಬಂಗಾಳ, ಕೇರಳಾದಂತಹ ರಾಜ್ಯಗಳಲ್ಲಿ ಸ್ವಾತಂತ್ರ್ಯಾನಂತರದ ಚಳುವಳಿಯನ್ನು ಮುಂದುವರಿಸಿಕೊಂಡು ಬಂದುದರ ಪ್ರತಿಫಲವಾಗಿ, ಎಡರಂಗ ಸರ್ಕಾರಗಳು ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ.

ಇಂದು ಎಡರಂಗ ಸರ್ಕಾರ ಹಾಗೂ ಅಲ್ಲಿಯ ಜನತೆಯ ನಾಯಕತ್ವದಲ್ಲಿ ಸಾಮ್ರಾಜ್ಯದಂತ ಭೂಮಿಯ ಪ್ರಶ್ನೆ ಮೇಲೆದ್ದು ಬರುತ್ತಿದೆಯೆಂದು ಸೆಪ್ಟಂಬರ್ ಚಳುವಳಿ ತೋರಿಸಿಕೊಟ್ಟಿದೆ. ಭೂಮಿಯ ಪ್ರಶ್ನೆ ಹಲವಾರು ರಾಜ್ಯಗಳಲ್ಲಿ ವಿಭಿನ್ನವಾಗಿದೆ, ನಮ್ಮ ರಾಜ್ಯದಲ್ಲಿ ಇಂದು ಸಿ ಮತ್ತು ಡಿ ಭೂಮಿಯ ಪ್ರಶ್ನೆಯಾದರೆ, ಕೆಲವೆಡೆ ಗುಡಿಗುಂಡಾರಗಳ ಭೂಮಿಯಾಗಿದೆ. ಬಂಗಾಳದಲ್ಲಿ ಖಾಸಗೀ ಭೂಮಿಯಾಗಿದೆ.

ರಾಷ್ಟ್ರದ 12 ಬೇಡಿಕೆಗಳಿಗಾಗಿ ಹೋರಾಟ ಮಾಡಿದುದರ ಪ್ರಾಥಮಿಕ ಭಾಗವಾಗಿ ನಾಲ್ಕು ಎಡ ಪಕ್ಷಗಳ ರೈತ-ಕೃಷಿ ಕೂಲಿಕಾರ ಸಂಘಟನೆಗಳು ಏಪ್ರಿಲ್ ತಿಂಗಳಲ್ಲಿ ಭೂಸುಧಾರಣಾ ಸಮಾವೇಶ ನಡೆಸಲಿವೆ.

ಇಂದು ಮೇಲಿನಿಂದ ಭೂಮಿಯ ಪ್ರಶ್ನೆಯನ್ನು ಹೇಗೆ ಎತ್ತಿಕೊಳ್ಳಬೇಕೆಂದು ಚರ್ಚೆ ಮಾಡಿ ತೀರ್ಮಾನಿಸಬೇಕಾಗಿದೆ. ಅದಕ್ಕೆ ಕೆಳಗಡೆಯಿಂದ ಬದಲಾದ ಪರಿಸ್ಥಿತಿಯಲ್ಲಿ, ಭೂಸಂಬಂಧಗಳು ಹೇಗಿವೆ, ಗೇಣಿ ಪದ್ಧತಿ, ಗುತ್ತಿಗೆ ಪದ್ಧತಿ, ಪಾಲಿಗೆ ಮಾಡುವುದು, ಸಾಲದ ಬಲೆಯಲ್ಲಿ ಬಡರೈತರು ಹೇಗೆ ಸಿಕ್ಕುಹಾಕಿಕೊಳ್ಳುತ್ತಿದ್ದಾರೆ, ಹೆಚ್ಚಾಗುತ್ತಿರುವ ಕಾರಣ ರಾಜಕೀಯ ಲಾಭಕ್ಕಾಗಿ ಭೂಮಾಲೀಕರನ್ನು ಸಾಕಿಸಲಹಿಕೊಂಡು ಹೋಗುವ ಕಾಂಗ್ರೆಸ್ ಗ್ರಾಮೀಣ ಭೂಸಂಬಂಧಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಪ್ರಭುತ್ವದಲ್ಲಿ ಹಿಂದಿಗಿಂತಲೂ ಹೆಚ್ಚಗೆ ಅಸ್ತಿತ್ವವನ್ನು ಪಡೆಯಲು ಭೂಮಾಲೀಕರಿಗೆ ಸಾಧ್ಯವಾಗುತ್ತಿದೆ.

ಕಾರಣ ಎಡಶಕ್ತಿಗಳೇ ದೀರ್ಘ ಅಧ್ಯಯನ ನಡೆಸುವ ಮುಖಾಂತರ ವಾಸ್ತವಿಕ ಪರಿಸ್ಥಿತಿಯನ್ನು ಪತ್ತೆ ಹಚ್ಚಿ ಘೋಷಣೆ ಕೊಡುವ ಮುಖಾಂತರವೇ, ನಗರದ ಕಾರ್ಮಿಕ ವರ್ಗದ ಬೆಂಬಲ, ನಾಯಕತ್ವದೊಂದಿಗೆ, ಗ್ರಾಮೀಣ ಕೃಷಿ ಕೂಲಿಕಾರ ಬಡರೈತರನ್ನು ಬೀದಿಗೆ ಇಳಿಸುವದಾಗಿದೆ.

ಈ ಆಶಯದೊಂದಿಗೆ ಭೂ ಸಮಾವೇಶವನ್ನು ನಡೆಸುವುದಾಗಿದೆ, ಅಧ್ಯಯನ ಮಾಡುವದಾಗಿದೆ. ಭೂರಹಿತರ ಸಂಖ್ಯೆ, ಕೆಲವರ ಕೈಯಲ್ಲಿ ಕೇಂದ್ರೀಕರಣವಾಗುತ್ತಿರುವ ಭೂಮಿ ಇದರಿಂದ ಭೂಮಾಲೀಕರ ಆರ್ಥಿಕ ಹಿಡಿತ ಹಾಗೂ ರಾಜಕೀಯ ಹಿಡಿತವನ್ನು ಸಂಗ್ರಹಿಸಲು ಪ್ರತಿನಿಧಿಗಳು ಹೆಚ್ಚೆಚ್ಚು ವಿವರಣೆಗಳನ್ನು ರಾಜ್ಯ ಸಮಾವೇಶಕ್ಕೆ ಬರೆದುಕಳಿಸುವಂತಾಗಬೇಕು. ಅದರ ಮುಖಾಂತರ ರಾಜ್ಯ ಸಮಾವೇಶವನ್ನು ಹಾಗೆಯೇ ಅಖಿಲ ಭಾರತ ಸಮಾವೇಶವನ್ನು ಶ್ರೀಮಂತಗೊಳಿಸಲು ಪ್ರಯತ್ನಿಸ ಬೇಕೆಂದು ಕರೆ ಕೊಟ್ಟರು.

ರೇಗನ್ ವಿದಾಯ-ರೇಗನ್ ನೀತಿಗೆ?

ಕಳೆದ ಎಂಟು ವರ್ಷಗಳಿಂದ ವಿಶ್ವದ ಹಲವೆಡೆ ಸಾಮ್ರಾಜ್ಯಶಾಹೀ ದುಸ್ಸಾಹಸಗಳನ್ನು ನಡೆಸಿ ಖಂಡನೆಗೊಳಗಾದ ರೋನಾಲ್ಡ್ ರೇಗನ್‌ರ ಅಧ್ಯಕ್ಷತೆಯ ಅವಧಿ ಮುಗಿದಿದೆ. ಜನವರಿ 20ರಂದು ಜಾರ್ಜ್‌ಬುಶ್ ಅಮೆರಿಕಾ ಸಂಯುಕ್ತ ಸಂಸ್ಥಾನಗಳ 41ನೇ ಅಧ್ಯಕ್ಷರನ್ನಾಗಿ ವಹಿಸಿಕೊಂಡಿದ್ದಾರೆ.

"ಅಮೆರಿಕನ್ ಸ್ವಾತಂತ್ರ್ಯ ಒಂದೇ ದೇಶಕ್ಕೆ ಸೇರಿದ್ದಲ್ಲ. ನಾವು ವಿಶ್ವದ ಸ್ವಾತಂತ್ರ್ಯದ ಪಾಲಕರು!" ಕಳೆದ ಎಂಟು ವರ್ಷಗಳಿಂದ ಹೇಳಿಕೊಂಡು ಬಂದು ಅಮೆರಿಕನ್ನರ ಚಪ್ಪಾಳೆ ಗಿಟ್ಟಿಸುವುದರಲ್ಲೂ ಆಗಾಗ ಯಶಸ್ವಿಯಾದ ರೇಗನ್ ತಮ್ಮ ಅಂತಿಮ ಭಾಷಣದಲ್ಲೂ ಹೇಳಿದ ಮಾತು ಇದೇ. ಗ್ರೆನಡಾದಲ್ಲಿ, ಲಿಬ್ಯಾದ ವಿರುದ್ಧ ಎರಡು ಬಾರಿ, ನಿಕರಾಗುವಾದ ವಿರುದ್ಧ ವಿಶ್ವಾದ್ಯಂತ ಖಂಡನೆಗೊಳಗಾದ ತಮ್ಮ ದುಸ್ಸಾಹಸಗಳ ನಂತರವೂ ಈ ಮಾತು ಉದ್ಗರಿಸಲು ಅವರಿಗೆ ಯಾವ ನಾಚಿಕೆಯೂ ಅನಿಸಿರಲಿಕ್ಕಿಲ್ಲ. ಕಾರಣ ಬಂಡವಾಳಶಾಹಿಯ, ಅದಕ್ಕೂ ವಿಶೇಷವಾಗಿ ಸಾಮ್ರಾಜ್ಯಶಾಹಿಯ ಒಂದು ನಿಜವಾದ ಅಥವಾ "ಶಾಸ್ತ್ರೀಯ" ಪ್ರತೀಕವಾಗಿದ್ದರು ರೇಗನ್.

ಸ್ವಾತಂತ್ರ್ಯದ ಪಾಲಕನಾಗಿ "ಸದಾ ವಿಶ್ವವನ್ನು ಮುಂದಿನ ದಿಗಂತಕ್ಕೆ ಕೊಂಡೊಯ್ಯುತ್ತದೆ" ಎಂದು ರೇಗನ್ ತನ್ನ ಅಂತಿಮ ಭಾಷಣದಲ್ಲಿ ಹಾಡಿ-ಹೊಗಳಿರುವ ಈ ದೇಶದ 41ನೇ ಅಧ್ಯಕ್ಷರ, ರೇಗನ್‌ರ ಉತ್ತರಾಧಿಕಾರಿಯ ಆಯ್ಕೆಯಲ್ಲಿ ಕಂಡುಬಂದ ಯಾವ ಅಂಶಗಳೂ ರೇಗನ್‌ರ ಈ ಭಾವುಕ ಉದ್ಗಾರಗಳನ್ನು ಸಮರ್ಥಿಸಿಲ್ಲ.

ಈ ಬಾರಿಯ ಅಮೆರಿಕನ್ ಅಧ್ಯಕ್ಷೀಯ ಚುನಾವಣೆ ಅತ್ಯಂತ 'ನಕಾರಾತ್ಮಕ' ಚುನಾವಣೆ ಎಂದು ಬೂರ್ಜ್ವಾ ವೀಕ್ಷಕರು ಕೂಡಾ ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿ ಪಕ್ಷಗಳ ಅಥವಾ ವ್ಯಕ್ತಿಗಳ ಧೋರಣೆಗಳ, ನಿಲುವುಗಳ ಬಗ್ಗೆ ಚರ್ಚೆಯೆಂಬುದೇ ನಡೆಯಲಿಲ್ಲ. ಬದಲಾಗಿ ಟಿ.ವಿ.ಯಲ್ಲಿ ಅವರ 'ಇಮೇಜ'ಗಳನ್ನು ಲಕ್ಷಗಟ್ಟಳೆ ಡಾಲರ್ ಖರ್ಚು ಮಾಡಿ ಯಾರು ಹೆಚ್ಚು ಯಶಸ್ವಿಯಾಗಿ ತೋರಿಸಿದರು ಎಂಬುದೇ ಮುಖ್ಯವಾಗಿತ್ತು. ಟಿ.ವಿ. ಜಾಹೀರಾತು ಜಗತ್ತಿನ ತಂತ್ರಗಳೇ ಇಲ್ಲಿಯೂ ಉಪಯೋಗವಾದವು. 'ಬುಶ್' ಎಂಬ ಉತ್ಪಾದನೆಗಿಂತ 'ದುಕಾಕಿಸ್' (ಡೆಮೊಕ್ರೆಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ) ಎಂಬ ಉತ್ಪಾದನೆ ಎಷ್ಟು ಕೀಳು, ಯಾವ ರೀತಿಯಲ್ಲಿ ಕೀಳು ಎಂದೆಲ್ಲಾ ಪ್ರಚಾರ ನಡೆಸುವುದೇ ಚುನಾವಣಾ ಪ್ರಚಾರದ ರೀತಿಯಾಗಿತ್ತು. ವಿಶ್ವದ ರಾಜಕೀಯದ ಮೇಲೆ ಪ್ರಭಾವ ಬೀರುವ, ರೇಗನ್ ಹೇಳಿದಂತೆ "ಸದಾ ಮುಂದಿನ ದಿಗಂತಕ್ಕೆ ವಿಶ್ವವನ್ನು ಕೊಂಡೊಯ್ಯುವ" ದೇಶದ ಅತೀ ಪ್ರಮುಖ ಚುನಾವಣೆಯಲ್ಲಿ ಮತದಾನ ನೀಡಿದವರು ಕೇವಲ 50% !

ಕಳೆದ 8ವರ್ಷಗಳ 'ರೇಗನಾಮಿಕ್ಸ್'ನ ದುಷ್ಪರಿಣಾಮಗಳನ್ನು ಅನುಭವಿಸಿಯೂ, ಅಮೆರಿಕನ್ ಮತದಾರ ಈ ಚುನಾವಣೆಯಲ್ಲಿ ಏಕೆ ಆಸಕ್ತಿ ತೋರಲಿಲ್ಲ? ಎಂಬ ಪ್ರಶ್ನೆ ಖಂಡಿತಾ ಬರುತ್ತದೆ.' ರೇಗನ್‌ರ 8 ವರ್ಷಗಳ ಅಧ್ಯಕ್ಷತೆಯನ್ನು "ಸಂಪ್ರದಾಯ ಶರಣತೆಯ ಕ್ರಾಂತಿ" ಎಂದು ಕೆಲವರು ಬಣ್ಣಿಸುತ್ತಾರೆ. ಅಂದರೆ ಬಂಡವಾಳಶಾಹಿ ಪದ್ಧತಿ ಸಮಾಜವಾದಿ ಪದ್ಧತಿಯೊಂದಿಗೆ ಸ್ಪರ್ಧಿಸಬೇಕಾಗಿಬಂದಾಗ ಧರಿಸಬೇಕಾದ 'ಮಾನವೀಯತೆ'ಯ ಮುಖವಾಡ ಕೂಡ ವಿಫಲವಾಗತೊಡಗಿದಾಗ ಅದನ್ನು ಕಿತ್ತೆಸೆದು ಮತ್ತೆ ಅದರ "ಶಾಸ್ತ್ರೀಯ" ವಿಧಾನಗಳನ್ನೇ ಅನುಸರಿಸಿ ಅಮೆರಿಕನ್ ಆರ್ಥಿಕತೆಯಲ್ಲಿ ಮತ್ತೆ ಚೈತನ್ಯ ತುಂಬಿದ್ದು ರೇಗನ್‌ರ 'ಸಾಧನೆ'ಯಾಗಿತ್ತು. ಈ ದೃಷ್ಟಿಯಿಂದ ನೋಡಿದರೆ ಬುಶ್‌ರವರ ಗೆಲುವು ರೇಗನ್‌ರವರ ಅಂತಿಮ ಗೆಲುವು ಕೂಡ. ಆದರೆ ಈಗಿರುವ ಪ್ರಶ್ನೆ- ಇದು ಎಷ್ಟು ದಿನ ಹೀಗೆ ಸಾಗಲು ಸಾಧ್ಯ? ಯಾಕೆಂದರೆ ಈ ಚೈತನ್ಯ ಅಮೆರಿಕನ್ ಆರ್ಥಿಕತೆಗೆ ರೇಗನ್ ಕೊಟ್ಟಿರುವುದು ತೃತೀಯ ಜಗತ್ತಿನ ದೇಶಗಳ ರಕ್ತ ಹೀರಿ ಮಾತ್ರವಲ್ಲ, ತನ್ನದೇ ದೇಶದ ಮುಂದಿನ ಜನಾಂಗಗಳ ಭವಿಷ್ಯವನ್ನು ಅಂಧಕಾರಮಯಗೊಳಿಸಿ ಕೂಡಾ. ಉದಾ: ಅಮೆರಿಕ ಆಂತರಿಕವಾಗಿ ಒಂದು ಲಕ್ಷ ಕೋಟಿ ಡಾಲರುಗಳ ಸಾಲ ಹೊಂದಿದೆ. ಅಂತರ್ರಾಷ್ಟ್ರೀಯವಾಗಿ ಅದೀಗ ದೊಡ್ಡ ಸಾಲಗಾರ ದೇಶ. ವಿದೇಶಿ ಉತ್ಪಾದಕರು ಅಮೆರಿಕನ್ ವಾಣಿಜ್ಯವನ್ನು ಅಮೆರಿಕದಲ್ಲೇ ಹಿಂದೆ ಸರಿಸುತ್ತಿದ್ದಾರೆ. "ಮೆಡ್ ಇನ್ ಜಪಾನ್" ಲೇಬಲ್ ಅಮೆರಿಕನ್ ಅಳರಸರಲ್ಲಿ ನಡುಕ ಹುಟ್ಟಿಸುತ್ತಿದೆ.

41ನೇ ಅಮೆರಿಕನ್ ಅಧ್ಯಕ್ಷ ಜಾರ್ಜ್ ಬುಶ್ ಈ ಹಿನ್ನೆಲೆಯಲ್ಲಿ ಎಷ್ಟು ದಿನ ರೇಗನ್ ನೀತಿ ಮುಂದುವರಿಸಲು ಸಾಧ್ಯ?

ಭಾರತ ಸರ್ಕಾರ ಅಮೆರಿಕನ್ ಕೃತ್ಯವನ್ನು ಖಂಡಿಸಬೇಕು

ಅಮೆರಿಕನ್ ನಾವಿಕ ಜೆಟ್ ವಿಮಾನಗಳು ಜನವರಿ 4ರಂದು ಲಿಬ್ಯಾದ ವಿಮಾನಗಳನ್ನು ಹೊಡೆದುರುಳಿಸಿದನ್ನು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತೀವ್ರವಾಗಿ ಖಂಡಿಸಿದೆ. ಲಿಬ್ಯಾ ಒಂದು ರಾಸಾಯನಿಕ ಶಸ್ತ್ರಾಸ್ತ್ರಗಳ ಸ್ಥಾವರವನ್ನು ಸ್ಥಾಪಿಸಿದೆ ಎಂದು ಸತತ ಅಪಪ್ರಚಾರ ನಡೆಸಿರುವ ಹಿನ್ನೆಲೆಯಲ್ಲಿ ಈ ಆಕ್ರಮಣ ನಡೆಸಲಾಗಿದೆ. ಲಿಬ್ಯಾ ಈ ಅಪಪ್ರಚಾರವನ್ನು ಖಂಡಿಸಿ ಈ ಸ್ಥಾವರವನ್ನು ಅಂತರ್ರಾಷ್ಟ್ರೀಯ ತಂಡವೊಂದು ಬಂದು ಬೇಕಾದರೆ ಪರೀಕ್ಷಿಸಲಿ ಎಂದು ಘೋಷಿಸಿದೆ. ಅಮೆರಿಕನ್ ಆಡಳಿತ ಕ್ಷುಲ್ಲಕ ನೆಪಗಳನ್ನು ಮುಂದೆ ಮಾಡಿ ಲಿಬ್ಯಾವನ್ನು ಹೆದರಿಸುವ ಆ ಮೂಲಕ ಮಧ್ಯಪ್ರಾಚ್ಯದ ಸಮಸ್ಯೆಗಳನ್ನು ಪರಿಹರಿಸುವ ಎಲ್ಲ ಪ್ರಯತ್ನಗಳನ್ನು ಬುಡಮೇಲು ಮಾಡುವ ಯತ್ನ ನಡೆಸುತ್ತಿದೆ ಎಂದು ಹೇಳಿರುವ ಪಾಲಿಟ್‌ಬ್ಯೂರೋ ಈ ಅಮೆರಿಕನ್ ಕೃತ್ಯವನ್ನು ಬಲವಾಗಿ ಖಂಡಿಸಬೇಕೆಂದು ಭಾರತ ಸರ್ಕಾರಕ್ಕೆ ಕರೆ ನೀಡಿದೆ. ಅಮೆರಿಕನ್ ಬೆದರಿಕೆಗಳನ್ನು ಎದುರಿಸುವಲ್ಲಿ ಲಿಬ್ಯಾದ ಸರ್ಕಾರ ಹಾಗೂ ಜನತೆಗೆ ಸಿ.ಪಿ.ಐ.(ಎಂ)ನ ಸೌಹಾರ್ದತೆಯನ್ನು ಪಾಲಿಟ್‌ಬ್ಯೂರೋ ವ್ಯಕ್ತಪಡಿಸಿದೆ.

ಸಾಲ ತೀರಿಸಲು ಮಕ್ಕಳನ್ನು ಕೊಲ್ಲಬೇಕೇ?

ತಂಜಾನಿಯಾದ ಮಾಜಿ ಅಧ್ಯಕ್ಷ ಜ್ಯೂಲಿಯಸ್ ನ್ಯೆರೇರೆ ಈ ಪ್ರಶ್ನೆ ಕೇಳಿದರು. ಕೆಲವು ವರ್ಷಗಳ ಹಿಂದೆ. "ಹೌದು" ಎನ್ನುತ್ತಾರೆ ಈಗ ವಿಶ್ವಸಂಸ್ಥೆಯ ಮಕ್ಕಳ ಶಿಕ್ಷಣ ಸಂಘಟನೆ ಯೂನಿಸೆಫ್‌ನ ಕಾರ್ಯಕ್ರಮಗಳ ಉಪ ನಿರ್ದೇಶಕರಾದ ಡಾ॥ ರಿಚರ್ಡ್ ಜಾಲಿ ಇತ್ತೀಚಿನ ಯೂನಿಸೆಫ್‌ನ ವರದಿ ಪ್ರಕಾರ ಬಹಳಷ್ಟು ತೃತೀಯ ಜಗತ್ತಿನಲ್ಲಿ ಕಳೆದ 4 ದಶಕಗಳ ಪ್ರಗತಿಯಲ್ಲಿ ಈಗ ಹಿನ್ನಡೆ ಕಾಣಬರುತ್ತಿದೆ. ಇದರ ಫಲ ಹೆಚ್ಚಿನ ಬಡತನ. ಇದಕ್ಕೆ ಮೊದಲ ಬಲಿ ಮಕ್ಕಳು. ಕಳೆದ 12ತಿಂಗಳಲ್ಲಿ ಅಭಿವೃದ್ಧಿಯಲ್ಲಿನ ಹಿಂಜರಿತದಿಂದಾಗಿ ಐವತ್ತು ಸಾವಿರ ಮಕ್ಕಳು ಸತ್ತಿದ್ದಾರೆ ಎನ್ನುತ್ತಾರೆ ಡಾ॥ ಜಾಲಿ. ಈ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡಲು ಆ ದೇಶಗಳ ಸರ್ಕಾರಗಳಿಗೆ ಸಾಧ್ಯವಾಗದರಿಂದ ಈ ಸಾವುಗಳು ಸಂಭವಿಸಿದವು. ಈ ಹಿನ್ನೆಲೆಯಲ್ಲಿ ಐ.ಎಂ.ಎಸ್. ತೃತೀಯ ಜಗತ್ತುಗಳಿಗೆ ನೀಡುವ ಆರ್ಥಿಕ ಸಲಹೆಗಳನ್ನು ಯೂನಿಸೆಫ್ ತೀವ್ರವಾಗಿ ಖಂಡಿಸಿದೆ.

ಪಶ್ಚಿಮ ಬಂಗಾಳದಲ್ಲಿ ನಿಜವಾದ ಯೋಜನಾ ವಿಕೇಂದ್ರೀಕರಣ

ಪ್ರಧಾನಮಂತ್ರಿಗಳು ಇತ್ತೀಚೆಗೆ ರಾಜ್ಯಗಳಿಗೆ ಭೇಟಿ ಕೊಟ್ಟಾಗಲೆಲ್ಲಾ ಯೋಜನಾ ವಿಕೇಂದ್ರೀಕರಣದ ಬಗ್ಗೆ ಭಾಷಣ ಬಿಗಿಯುವುದು ಎಲ್ಲರಿಗೂ ತಿಳಿದಿದೆ. ಆದರೆ ವಿಕೇಂದ್ರೀಕರಣದ ಅವರ ಅರ್ಥ ಜನರಿಂದ ಚುನಾಯಿತ ರಾಜ್ಯ ಸರ್ಕಾರಗಳನ್ನು ಬದಿಗೆ ತಳ್ಳಿ ಜಿಲ್ಲಾ ಮಟ್ಟದ ಅಧಿಕಾರಶಾಹಿಗಳ ಮೂಲಕ ಯೋಜನಾ ವಿಕೇಂದ್ರೀಕರಣ. ಅಂದರೆ ಈ ಅಧಿಕಾರಶಾಹಿಗಳ ಮೂಲಕ ಕೇಂದ್ರೀಕೃತಗೊಳ್ಳುವ ವಿಕೇಂದ್ರೀಕರಣ!

ತದ್ವಿರುದ್ಧವಾಗಿ ನಿಜವಾದ ಯೋಜನಾ ವಿಕೇಂದ್ರೀಕರಣದ ಬಗ್ಗೆ ಒಂದು ವರದಿಯನ್ನು ಯೋಜನಾ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಪಿ.ಟಿ.ಐ. ವಾರ್ತಾ ಸಂಸ್ಥೆ ವರದಿ ಮಾಡಿದೆ. ಪಶ್ಚಿಮ ಬಂಗಾಳದಲ್ಲಿ ಒಟ್ಟು ಯೋಜನಾ ಬಜೆಟ್ಟಿನ 40%ದಷ್ಟು ಜಿಲ್ಲಾ ಮತ್ತು ಬ್ಲಾಕ್ ಯೋಜನಾ ಸಮಿತಿಗಳಿಗೆ ವಿಕೇಂದ್ರೀಕರಿಸಲಾಗಿದೆ. ಇದರಿಂದ ಪಶ್ಚಿಮ ಬಂಗಾಳದ ಯೋಜನೆಯನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನದಲ್ಲಿ ತೀವ್ರ ಬದಲಾವಣೆ ಬಂದಿದೆ ಎಂದು ಆ ವರದಿ ತಿಳಿಸಿದೆ.

1984-85 ರಲ್ಲಿ ಪ್ರಯೋಗವಾಗಿ ಒಂದು ಜಿಲ್ಲೆಯಲ್ಲಿ ಆರಂಭಿಸಿದ್ದ ಈ ವಿಧಾನವನ್ನು ಈಗ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಭೂಸುಧಾರಣೆ ಮತ್ತು ಪಂಚಾಯತುಗಳಿಗೆ ನಿಯಮಿತ ಚುನಾವಣೆಗಳಿಂದ ಇದು ಸಾಧ್ಯವಾಗಿದೆ ಎಂದು ಯೋಜನಾ ಆಯೋಗಕ್ಕೆ ಸಲ್ಲಿಸಿದ ವರದಿ ತಿಳಿಸಿದೆ. ಬ್ಲಾಕ್ ಹಾಗೂ ಜಿಲ್ಲಾ ಮಟ್ಟದಲ್ಲಿ ರೂಪಿಸಿದ ಯೋಜನೆಗಳು ಸ್ಥಳೀಯ ಜನತೆಯ ಆಯ್ಕೆ ಹಾಗೂ ದೃಷ್ಟಿಕೋನಗಳನ್ನು ಪ್ರತಿಫಲಿಸುತ್ತವೆ. ಯೋಜನೆಯ ಒಟ್ಟಾರೆ ಆದ್ಯತೆಯ ಚೌಕಟ್ಟಿನಲ್ಲಿ ಪ್ರತಿಯೊಂದು ಇಲಾಖೆಯ ಬಜೆಟನ್ನು ರಾಜ್ಯಮಟ್ಟದ ಬಾಬ್ತು ಹಾಗೂ ಜಿಲ್ಲಾಮಟ್ಟದ ಬಾಬ್ತುಗಳು ಎಂದು ವಿಂಗಡಿಸಲಾಗಿದೆಯೆಂದು ವರದಿ ತಿಳಿಸಿದೆ. ಬಜೆಟಿನ ಪರಿಮಿತಿಯೊಳಗೆ ಬ್ಲಾಕ್ ಯೋಜನಾ ಸಮಿತಿಗಳು ಗ್ರಾಮ ಪಂಚಾಯತ್‌ಗಳ ಮಟ್ಟದಿಂದಲೇ ಬ್ಲಾಕ್ ಯೋಜನೆಯನ್ನು ರೂಪಿಸುವ ಕೆಲಸವನ್ನು ಆರಂಭಿಸುತ್ತವೆ.

ಈ ಪ್ರಯೋಗದಲ್ಲಿ ಸ್ಥಳೀಯ ಜನತೆ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ವಿವಿಧ ಯೋಜನಾ ಬಾಬ್ತುಗಳಿಗೆ ಮೀಸಲಿಟ್ಟ ಹಣದ ದಕ್ಷ ಉಪಯೋಗ, ಗರಿಷ್ಠ ಉದ್ಯೋಗಾವಕಾಶ ಹಾಗೂ ಅರ್ಹರಿಗೆ ಸಾಮಗ್ರಿಗಳ ಪೂರೈಕೆ ಸಾಧ್ಯವಾಗಿದೆ ಎಂದೂ ವರದಿ ತಿಳಿಸಿದೆ.

ರಾಸಾಯನಿಕ ಯುದ್ಧ ಸಂಶೋಧನೆಯಲ್ಲಿ ಮುಂದು ಆದರೂ ಬೇರೆ ದೇಶಗಳಿಗೆ ಬುದ್ಧಿವಾದ

ಇರಾನ್-ಇರಾಕ್ ಯುದ್ಧದಲ್ಲಿ ವಿಷ ವಾಯುವಿನ ಬಳಕೆಯ ಬಗ್ಗೆ ಆತಂಕ ಪ್ರದರ್ಶಿಸಿದ, ಲಿಬ್ಯಾ ರಾಸಾಯನಿಕ ಶಸ್ತ್ರಾಸ್ತ್ರ ತಯಾರಿಸುತ್ತಿದೆಯೆಂದು ಹಾಹಾಕಾರ ಎಬ್ಬಿಸಲು ಯತ್ನಿಸುವ ಅಮೆರಿಕಾ ರಾಸಾಯನಿಕ ಯುದ್ಧದ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಎಲ್ಲಕ್ಕೂ ಮುಂದಿದೆ. ಕಳೆದ ಏಳು ವರ್ಷಗಳಲ್ಲಿ ಅಮೆರಿಕಾದ ಫೆಡರಲ್ ಸರ್ಕಾರ ರಾಸಾಯನಿಕ ಶಸ್ತ್ರಾಸ್ತ್ರ ರೂಪಿಸಲು ಸುಮಾರು 16ಶತಕೋಟಿ ಡಾಲರುಗಳನ್ನು ಖರ್ಚು ಮಾಡಿದೆಯೆಂದು ತಿಳಿಸಲಾಗಿದೆ.

ಪ್ಯಾರಿಸ್ಸಿನಲ್ಲಿ ಇತ್ತೀಚೆಗೆ ಮುಗಿದ 149- ದೇಶಗಳ ರಾಸಾಯನಿಕ ಶಸ್ತ್ರಾಸ್ತ್ರ ಪ್ರತಿಬಂಧಿಸುವುದನ್ನು ಚರ್ಚಿಸಿದ ಅಂತರ್ರಾಷ್ಟ್ರೀಯ ಸಮ್ಮೇಳನ ಅಮೆರಿಕಾ ಮತ್ತದರ ಮಿತ್ರರ ಕೇಳಿಕೆಯಂತೆ ನಡೆಯಿತು. ಅದರಲ್ಲಿ ಸೋವಿಯತ್ ಒಕ್ಕೂಟ ಏಕಪಕ್ಷೀಯವಾಗಿ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಯಾವುದೇ ಒಪ್ಪಂದಕ್ಕೆ ಕಾಯದೆ ಕಡಿತ ಮಾಡಲಾರಂಭಿಸುವುದಾಗಿ ಘೋಷಿಸಿ ಮತ್ತೊಮ್ಮೆ ವಿಶ್ವಶಾಂತಿಯ ಬಗ್ಗೆ ತನ್ನ ಪ್ರಾಮಾಣಿಕತೆಯನ್ನು ತೋರಿಸಿ ಶಾಂತಿಪ್ರಿಯ ಜನಗಳ ಗೌರವಕ್ಕೆ ಪಾತ್ರ ವಾಯಿತು. ಇತರ ಪಾಶ್ಚಿಮಾತ್ಯ ದೇಶಗಳು ಇದನ್ನು ಸ್ವಾಗತಿಸಿದರೂ ಇತರರಿಗೆ ಧಾರಾಳವಾಗಿ ಬುದ್ಧಿವಾದ ಸುರಿಯುವ ಅಮೆರಿಕಾ ಮಾತ್ರ ಮೌನ ವಾಗಿದೆ. ಮಾತ್ರವಲ್ಲ ಇನ್ನೂ ಭಯಾನಕವಾದ ಬೈನರಿ ಶಸ್ತ್ರಾಸ್ತ್ರ ತಯಾರಿಸಲು ಸಿದ್ಧವಾಗುತ್ತಿದೆ!

ಕಾಂ॥ ರತನ್‌ಲಾಲ್‌ಬ್ರಾಹ್ಮನ್ ನಿಧನಕ್ಕೆ ಸಂತಾಪ

13ನೇ ಮಹಾಧಿವೇಶನದ ಅತ್ಯಂತ ಹಿರಿಯ ಪ್ರತಿನಿಧಿ ಡಾರ್ಜಿಲಿಂಗ್‌ನ ಕಾ॥ ರತನ್‌ಲಾಲ್‌ಬ್ರಾಹ್ಮನ್ ಮಹಾಧಿವೇಶನದ ಕಲಾಪಗಳಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದಾಗ ರೈಲಿನಲ್ಲಿಯೇ ನಿಧನರಾಗಿದ್ದಾರೆ. ಈ ಹಿರಿಯ ಕ್ರಾಂತಿಕಾರಿ ಹಾಗೂ ಕಮ್ಯೂನಿಸ್ಟ್‌ನಿಗೆ ಸಿ.ಪಿ.ಐ(ಎಂ) ಪಾಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತಾ ಕಾ॥ ಬ್ರಾಹ್ಮನ್ ಡಾರ್ಜಿಲಿಂಗ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟ್ ಆಂದೋಲನದ ಪ್ರವರ್ತಕರು ಹಾಗೂ ಪ್ರಸಿದ್ಧ ಮುಖಂಡರಾಗಿದ್ದರು ಎಂದು ಹೇಳಿದೆ.

ಕಾಂ॥ ಬ್ರಾಹ್ಮನ್ 1933ರಲ್ಲಿ ನಡೆದ ಟೀ ಎಸ್ಟೇಟ್ ಕಾರ್ಮಿಕರ ಮೊದಲ ಮುಷ್ಕರದ ನೇತೃತ್ವ ವಹಿಸಿದರು. 1943ರಲ್ಲಿ ಪಕ್ಷ ಸೇರಿದ ಅವರು 1945 ರಲ್ಲಿ "ಟೀ ಗಾರ್ಡನ್ ಮಜ್ದೂರ್ ಯೂನಿಯನ್" ಸ್ಥಾಪಿಸಿದರು. 1959ರಿಂದ 1980ರವರೆಗೆ ಡಾರ್ಜಿಲಿಂಗ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದ ಕಾಂ॥ ಬ್ರಾಹ್ಮನ್ ಪಶ್ಚಿಮ ಬಂಗಾಳ ಅಸೆಂಬ್ಲಿಯಲ್ಲಿ 1952ರಲ್ಲಿ ಕಮ್ಯೂನಿಸ್ಟ್ ಗುಂಪಿನ ಇಬ್ಬರು ಸದಸ್ಯರಲ್ಲಿ ಒಬ್ಬರಾಗಿದ್ದರು. ಕಾಂ॥ ಜ್ಯೋತಿ ಬಸು 1971ರಿಂದ 1977ರವರೆಗೆ ಇವರು ಲೋಕ ಸಭಾ ಸದಸ್ಯರೂ ಆಗಿದ್ದರು.

ಡಾರ್ಜಿಲಿಂಗ್ ಜಿಲ್ಲೆಯ ಜನತೆಯ ಪ್ರೀತಿಯ ಮುಖಂಡರಾಗಿದ್ದ ಕಾಂ॥ ಬ್ರಾಹ್ಮನ್ ನೇಪಾಳಿ ಭಾಷಿತ ಜನತೆಯ ನಿಜವಾದ ಬೇಡಿಕೆಗಳನ್ನು ಪ್ರತಿಪಾದಿಸುತ್ತಾ ಬಂದರು. ಅದೇ ವೇಳೆಗೆ ನೇಪಾಳಿ ಮತ್ತು ಬಂಗಾಳಿ ಭಾಷಿಕ ... ಎಂದು ಪಿ.ಬಿ.ಶ್ರದ್ಧಾಂಜಲಿ ಅರ್ಪಿಸಿದೆ.

ಶೋಚನೀಯ ರಫ್ತು ಪರಿಸ್ಥಿತಿ

ರಫ್ತು ಹೆಚ್ಚಿಸಿ ದೇಶದ ವಿದೇಶ ವಿನಿಮಯ ದೃಢಗೊಳಿಸಲು ಆಮದಿನ ಉದಾರೀಕರಣ ಅತೀ ಮುಖ್ಯ ಎಂಬವಾದ ಕೇವಲ ನೆಪವೆಂಬುದು ಈಗ ಸ್ಪಷ್ಟವಾಗಿದೆ. ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ ಒಂದು ಸಮೀಕ್ಷೆಯಿಂದ ಮತ್ತು ರಿಝರ್ವ್ ಬ್ಯಾಂಕಿನ ಅಂಕಿ-ಅಂಶಗಳು ಇದನ್ನು ಸಾರಿ ಹೇಳುತ್ತಿವೆ.

ಸಂಸ್ಥೆ ಸಮೀಕ್ಷೆ ನಡೆಸಿದ 405 ದೊಡ್ಡ ಕಂಪನಿಗಳು 1951ರಿಂದ 1986ರವರೆಗೆ 2219 ವಿದೇಶೀ ಸಹಕಾರ ಒಪ್ಪಂದಗಳನ್ನು ಮಾಡಿಕೊಂಡವು. ಇವುಗಳಲ್ಲಿ 36%ದಷ್ಟು 1980ರ ನಂತರ ನಡೆದ ಒಪ್ಪಂದಗಳು. ಈ ಕಂಪನಿಗಳ ನಿವ್ವಳ ವಿದೇಶ ವಿನಿಮಯಗಳಿಗೆ 1975-76ರಲ್ಲಿ 93 ಕೋಟಿ ರೂ. ಇತ್ತು. 1983-84ರಲ್ಲಿ ಇದು -464 ಕೋಟಿ ರೂ. ಆಯಿತು. ಅಂದರೆ ರಫ್ತಿನಿಂದ ಪಡೆದ ಗಳಿಕೆಗಿಂತ ಆಮದಿಗೆ ವೆಚ್ಚವಾದ ವಿದೇಶೀ ವಿನಿಮಯವೇ 464 ಕೋಟಿ ರೂ. ಹೆಚ್ಚು! ವಿಶೇಷವೆಂದರೆ ವಿದೇಶಿ ವಿನಿಮಯದ ಕೊರತೆ ಹೆಚ್ಚುತ್ತಲೇ ಇದೆ. ತ್ವರಿತ ವೇಗದಲ್ಲಿ. ರಿಝರ್ವ್ ಬ್ಯಾಂಕ್-ಅಂಕಿ ಪ್ರಕಾರ ಆಮದಿನ ಉದಾರೀಕರಣದಿಂದ 1985-86ರಲ್ಲಿ ವಿದೇಶೀ ವಿನಿಮಯದ ಹೆಚ್ಚಿನ ವೆಚ್ಚ 820 ಕೋಟಿ ರೂ.ಗಳಾದರೆ 1986-87ರಲ್ಲಿ 1285 ಕೋಟಿ ರೂ.ಗಳು !

1988ರಲ್ಲಿ ರೂಪಾಯಿಯ ಅಪಮೌಲ್ಯ 16.92%

ಕಳೆದ ವರ್ಷ ರೂಪಾಯಿಯ ಬೆಲೆ ಜಗತ್ತಿನ ಯಾವುದೇ ಕರೆನ್ಸಿಗೆ ...ಸಿದರೂ ತೀವ್ರ ಕುಸಿತ ಕಂಡಿದೆಯೆಂದು ರಿಝರ್ವ್ ಬ್ಯಾಂಕ್ ಅಂಕಿ-ಅಂಶ ತಿಳಿಸಿದೆ. ಡಾಲರ್ ಎದುರು 16.92% ಜಪಾನೀ ಯೆನ್ ಎದುರು 15 .06% ಪೌಂಡ್ ಎದುರು 11.64% ಮತ್ತು ಜರ್ಮನಿಯ ಮಾರ್ಕ್ ಎದುರು 4.8% ಅಪಮೌಲ್ಯಗೊಂಡಿದೆ.

ಕಳೆದ ಆರುವರ್ಷಗಳಲ್ಲೇ ಭಾರತೀಯನೊಬ್ಬನ ಕೊಳ್ಳುವ ಸಾಮರ್ಥ್ಯ 40%ದಷ್ಟು ಕಡಿಮೆಯಾಗಿದೆ ಎಂದು ಲೆಕ್ಕ ಹಾಕಲಾಗಿದೆ.

 KRNW / BDS-312 MAG(2) PRB DECR 319-78-79

ಚುನಾಯಿತ ಸಿ.ಪಿ.ಐ.(ಎಂ) ಅಭ್ಯರ್ಥಿಗಳು

	ಚುನಾವಣಾ ಕ್ಷೇತ್ರ	ಅಭ್ಯರ್ಥಿ	ಪಡೆದ ಮತ	ಹತ್ತಿರದ ಪ್ರತಿಸ್ಪರ್ಧಿಯ ಮತ ಮತ್ತು ಪಕ್ಷ	
1.	ವಿಳ್ಳಿವಾಕ್ಕಂ	W.R.ವರದರಾಜನ್	99571	40150	(ಜಯಲಲಿತ)
2.	ನೆಲ್ಲಿಕುಪ್ಪಂ	ಸಿ. ಗೋವಿಂದರಾಜನ್	26233	14804	(ಸ್ವತಂತ್ರ)
3.	ನಾಗಪಟ್ಟಿಣಂ	ಜಿ.ವೀರಯ್ಯನ್	44681	30884	(ಕಾಂಗ್ರೆ)
4.	ತಿರುವಾರೊರ್ (ಮೀಸಲು)	ವಿ.ತಂಬುಸಾಮಿ	52520	26500	(ಜಯಲಲಿತ)
5.	ತಿರುವೆರಂಬೂರು	ಪಾಪ್ಪಾಉಮಾನಾಥ್	54814	32605	(ಕಾಂಗ್ರೆ)
6.	ದಿಂಡುಗಲ್	ಎಸ್.ಎ.ತಂಗರಾಜನ್	46617	28815	(ಕಾಂಗ್ರೆ)
7.	ಪಳನಿ (ಮೀಸಲು)	ಎನ್. ಪಳನಿವೇಲ್	34379	31524	(ಕಾಂಗ್ರೆ)
8.	ಕೊಯಮತ್ತೂರು (ಪೂರ್ವ)	ಕೆ. ರಮಣಿ	37397	29272	(ಕಾಂಗ್ರೆ)
9.	ಪದ್ಮನಾಭಪುರಂ	ಎಸ್. ನೂರ್‌ಮಹಮ್ಮದ್	21489	20155	ಕಾಂಗ್ರೆ)
10	ತೊಂಡಾಮತ್ತೂರು	ಯು.ಕೆ.ವೆಳ್ಳಿಂಗಿರಿ	62305	40702	(ಜಯಲಲಿತ)
11.	ತಿರುಪ್ಪೂರ್	ಸಿ.ಗೋವಿಂದಸ್ವಾಮಿ	55481	38102	(ಸಿ.ಪಿ.ಐ.)
12.	ಮೆಟ್ಟೂರ್	ಎಂ.ಸೀರಂಗನ್	23308	22180	(ಜಾ.ರಾಮಚಂದ್ರನ್)
13.	ತಿರುಚೆಂಗೋಡು	ವಿ.ರಾಮಸ್ವಾಮಿ	53346	35258	(ಜಯಲಲಿತ)
14	ಹರೂರು (ಮೀಸಲು)	ಎಂ.ಅಣ್ಣಾಮಲೈ	28324	26447	(ಜಯಲಲಿತ)
15.	ಗುಡಿಯಾತ್ತಂ	ಕೆ.ಆರ್.ಸುಂದರಂ	21828	19932	(ಜಯಲಲಿತ)

ವಾಸುದೇವನಲ್ಲೂರ್ (ಮೀಸಲು)ನಲ್ಲಿ ಆರ್. ಕೃಷ್ಣನ್ 411 ಮತಗಳಿಂದ ಸೋತರು. ಕಾಂಗ್ರೆ ಅಭ್ಯರ್ಥಿ ಗೆದ್ದರು. ಅಂಬಸಮುದ್ರಂನಲ್ಲಿ ಕಾಂಗ್ರೆ 31337 ಮತ ಪಡೆದರೆ, ಜಯಲಲಿತ ಗುಂಪು 27234 ಮತ್ತು ಸಿ.ಪಿ.ಐ.(ಎಂ.) ಅಭ್ಯರ್ಥಿ ಎಂ.ಪಾಂಡ್ಯನ್ 23354 ಮತ ಪಡೆದರು. ತಿರುವೆಟ್ಟಾರ್‌ನಲ್ಲಿ ಜಿ. ಹೇಮಚಂದ್ರನ್ 31084 ಮತ ಪಡೆದರು. ಕಾಂಗ್ರೆ ಅಭ್ಯರ್ಥಿ 39183 ಮತ ಪಡೆದು ಗೆದ್ದರು. ವಿಳಂಗೋಡುನಲ್ಲಿ ಕಾಂಗ್ರೆ ಅಭ್ಯರ್ಥಿ 41168 ಮತ ಪಡೆದು ಗೆದ್ದರು ಸಿ.ಪಿ.ಐ.(ಎಂ) ಅಭ್ಯರ್ಥಿ ಡಿ.ಮಣಿ 39954 ಮತ ಪಡೆದರು. ಗೂಡಲೂರುನಲ್ಲಿ ಕಾಂಗ್ರೆ ಅಭ್ಯರ್ಥಿ 38147 ಮತ ಪಡೆದರು. ಸಿ.ಪಿ.ಐ.(ಎಂ) ಅಭ್ಯರ್ಥಿ 36867 ಮತ ಪಡೆದರು.

ಈ ಕೆಳಗಿನ ಮೂರು ಕ್ಷೇತ್ರಗಳಲ್ಲಿ ಸಿ.ಪಿ.ಐ. ಕೂಡ ಸಿ.ಪಿ.ಐ.(ಎಂ)ಗೆ ಪ್ರತಿಸ್ಪರ್ಧಿಯಾಗಿತ್ತು. ಎರಡರಲ್ಲಿ ಕಾಂಗ್ರೆಸ್(ಐ) ಗೆದ್ದಿತು. ಮತಗಳ ವಿವರ ಹೀಗಿದೆ.

ವಾಸುದೇವನಲ್ಲೂರ್; ಕಾಂಗ್ರೆ- 30805 ; ಸಿ.ಪಿ.ಐ.(ಎಂ) 30394, ಸಿ.ಪಿ.ಐ. - 17325
ಗೂಡಲೂರು ; ಕಾಂಗ್ರೆ- 38147 ; ಸಿ.ಪಿ.ಐ.(ಎಂ) 36867, ಸಿ.ಪಿ.ಐ. - 19324
ಮೆಟ್ಟೂರು ; ಸಿ.ಪಿ.ಐ.(ಎಂ) 23308 ; ಜಯಲಲಿತ ಗುಂಪು 22180; ಸಿ.ಪಿ.ಐ. 7409

ಇನ್ನೊಂದು ಮತದಾನ ಕ್ಷೇತ್ರ ಮಧುರೈ (ಪೂರ್ವ)ದಲ್ಲಿ ಚುನಾವಣೆ ಒಬ್ಬ ಅಭ್ಯರ್ಥಿಯ ನಿಧನದಿಂದಾಗಿ ಮುಂದೂಡಲ್ಪಟ್ಟಿದೆ. ಇಲ್ಲಿಂದ ಸಿ.ಪಿ.ಐ.(ಎಂ)ನಿಂದ ಕಾ॥ ಎನ್.ಶಂಕರಯ್ಯ ಸ್ಪರ್ಧಿಸಿದ್ದರು.

ಕಾಂಗ್ರೆಸ್(ಐ)ಗೆ ಶೋಚನೀಯ ಸೋಲು

ಪುಟ 1ರಿಂದ

ಕಾಂಗ್ರೆಸ್(ಐ)ನು ಸೋಲಿಸಿ ಡಿ.ಎಂ.ಕೆ. ನೇತೃತ್ವದ ರಂಗಕ್ಕೆ ದೊಡ್ಡ ಜಯ ನೀಡಿದ ತಮಿಳುನಾಡಿನ ಜನತೆಯನ್ನು ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ಹಾರ್ದಿಕವಾಗಿ ಅಭಿನಂದಿಸಿದೆ. ಕೋಟಿ ಗಟ್ಟಲೆ ದುಡ್ಡು ಖರ್ಚು ಮಾಡಿ, ಅಧಿಕಾರದ ದುರುಪಯೋಗ ಮಾಡಿದ ಒಂದಿಲ್ಲೊಂದು ಕಾರಣ ಮುಂದೊಡ್ಡಿ ರಾಷ್ಟ್ರಪತಿ ಆಳ್ವಿಕೆಯನ್ನು ಮುಂದೂಡುತ್ತಾ ಬಂದ, ಜಾತೀಯತೆಯನ್ನು ಎತ್ತಿಕಟ್ಟಿ ಲಾಭ ಪಡೆಯುವ ಪ್ರಯತ್ನ ನಡೆಸಿದ ಕಾಂಗ್ರೆಸ್(ಐ)ಗೆ ತಮಿಳುನಾಡಿನ ಜನತೆ ತಮ್ಮ ಈ ತೀರ್ಪಿನ ಮೂಲಕ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್(ಐ)ನ ಧೋರಣೆಗಳ ಬಗ್ಗೆ ಜನರ ವಿರೋಧ ಎಷ್ಟಿದೆ ಎಂಬುದಕ್ಕೆ ತಮಿಳುನಾಡು ಚುನಾವಣೆ ಒಂದು ನಿದರ್ಶನ ಎಂದು ಪಾಲಿಟ್‌ಬ್ಯೂರೋ ಹೇಳಿದೆ. 20 ಸ್ಥಾನಗಳಲ್ಲಿ, 15 ರಲ್ಲಿ, ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ಜಯಗಳಿಸಿಕೊಟ್ಟ ಮತದಾರರಿಗೆ ತಮಿಳುನಾಡಿನ ಇಂದಿನ ಸಮಸ್ಯೆಗಳನ್ನು ಪರಿಹರಿಸಲು ಕರುಣಾನಿಧಿ ಸರ್ಕಾರ ಶ್ರಮಿಸುತ್ತಿದ್ದಾರೆಂದು ಆಶಿಸಿದೆ. ಈ ಚುನಾವಣೆಯ ಹಿನ್ನೆಲೆಯಲ್ಲಿ ರಾಜೀವ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ಎಡ ಮತ್ತು ಜಾತ್ಯಾತೀತ ಪಕ್ಷಗಳು ಶಕ್ತಿಗೂಡಿಸಿಕೊಳ್ಳಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಸಿ.ಪಿ.ಐ.(ಎಂ)ನ ತಮಿಳನಾಡು ರಾಜ್ಯ ಸಮಿತಿ ಒಂದು ಹೇಳಿಕೆ ನೀಡಿ ಮತದಾರರಿಗೆ ಕೃತಜ್ಞತೆ ಅರ್ಪಿಸುತ್ತಾ ಮುಂಬರುವ ಸಂಸತ್ ಚುನಾವಣೆಗಳ ದೃಷ್ಟಿಯಿಂದ ಇದೊಂದು ಮಹತ್ವಪೂರ್ಣ ವಿಜಯ ಎಂದಿದೆ.

ಮತಗಳು- ಸ್ಥಾನಗಳು: ಕೆಲವು ಅಂಕಿ-ಅಂಶ

ಪಕ್ಷ	ಸ್ಪರ್ಧಿಸಿದ ಸ್ಥಾನ	ಗೆದ್ದ ಸ್ಥಾನ	ಸರಾಸರಿ ಮತ	ಠೇವಣಿ ನಷ್ಟ
ಡಿ.ಎಂ.ಕೆ.	202	151	39500	-
ಎ.ಡಿ.ಎಂ.ಕೆ. (ಜಯಲಲಿತ)	201	27	25800	33
ಕಾಂಗ್ರೆ	215	26	22000	55
ಎ.ಡಿ.ಎಂ.ಕೆ. (ಜಾನಕಿ)	177	1	12300	141
ಸಿ.ಪಿ.ಐ.(ಎಂ)	20	15	40100	-
ಸಿ.ಪಿ.ಐ.	13	3	23000	5
ಜನತಾದಳ	10	4	28000	1
[illegible]	35	0	2400	34

[illegible]

ಡಿ.ಎಂ.ಕೆ. 33.4% ಮತಗಳಿಸಿತು. ಡಿ.ಎಂ.ಕೆ. ನೇತೃತ್ವದ ರಂಗ 38% ಮತಗಳಿಸಿದೆ. ಎ.ಐ.ಎ.ಡಿ.ಎಂ.ಕೆ.(ಜಯಲಲಿತ) ರಂಗ 23% ಮತ್ತು ಕಾಂಗ್ರೆಸ್(ಐ) ರಂಗ 21% ಮತಗಳಿಸಿದೆ.

ಕೇಂದ್ರೋದ್ಯಮ ಕಾರ್ಮಿಕರ ಸಮಾವೇಶ

ಪುಟ 1ರಿಂದ

ಅನುಮೋದಿಸುತ್ತಿರುವಾಗ ಸಿ.ಐ.ಟಿ.ಯು. ಹಿಂದಿನ ಒಪ್ಪಂದ ಮುಗಿದ ದಿನದಿಂದಲೇ ಪೂರ್ವಾನ್ವಯವಾಗುವ ಒಪ್ಪಂದಕ್ಕಾಗಿ ಎಲ್ಲರನ್ನೂ ಸಂಘಟಿಸಿ ಹೋರಾಡುತ್ತಿದೆ ಎಂದು ಕಾ॥ ರಾಯ್ ತಿಳಿಸಿದರು. ವೇತನ ಪರಿಷ್ಕರಣದ ವಿವಿಧ ಪ್ರಶ್ನೆಗಳ ಬಗ್ಗೆ ಸರಿಯಾದ ನಿಲುಮೆ ತಳೆದು ನಮ್ಮ ಬೇಡಿಕೆಗಳಿಗಾಗಿ ಐಕ್ಯ ಹೋರಾಟ ನಡೆಸಿದರೆ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲವೆಂದು ಅಭಿಪ್ರಾಯಪಟ್ಟರು.

ಖಾಸಗೀಕರಣದ ಬಗ್ಗೆ ಮಾತನಾಡುತ್ತಾ ಸಿ.ಐ.ಟಿ.ಯು. ಈ ಬೇಡಿಕೆಯತ್ತ ಗಮನ ಸೆಳೆಯಲು ಬೆಂಗಳೂರಿನಲ್ಲಿ ಅಖಿಲಭಾರತ ಸಮಾವೇಶ ನಡೆಸಿದಾಗ ನಂಬದ ಜನ ಈಗ ಬೆದರಿಕೆ ನಿಜವಾಗುತ್ತಿರುವುದನ್ನು ಕಾಣುತ್ತಿದ್ದಾರೆ ಎಂದರು. ಕಾಂಗ್ರೆಸ್(ಐ) ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ಜಾರಿಗೊಳಿಸಲು ಖಾಸಗೀಕರಣದ ಒಂದು ನೀಲನಕ್ಷೆಯನ್ನೇ ತಯಾರಿಸಿಟ್ಟಿದೆ ಎಂದು ವಿವರಿಸುತ್ತಾ ಮೊದಲಿಗೆ ಕೆಲವು ಖಾಸಗೀ ವ್ಯಕ್ತಿಗಳನ್ನು ಆಡಳಿತ ಮಂಡಳಿಗಳಲ್ಲಿ ಸೇರಿಸಲಾಗುವುದು, ನಂತರ ಸಂಪೂರ್ಣ ಕಂಪನಿಯನ್ನೇ ಖಾಸಗೀಕರಿಸಲಾಗುವುದು ಎಂದರು.

ಆರಂಭದಲ್ಲಿ ಕಾ॥ ವಿಭೂತಿಮಠ್ ಅವರು ಸಮಾವೇಶಕ್ಕೆ ಸ್ವಾಗತಕೋರಿ ಸಾರ್ವಜನಿಕ ಕೈಗಾರಿಕೆಗಳಲ್ಲಿ ವೇತನ ಪರಿಷ್ಕರಣದಲ್ಲಿನ ವಿವರಗಳನ್ನು ನೀಡಿದರು. ಕಾ॥ ಎಸ್. ಸೂರ್ಯನಾರಾಯಣರಾವ್, ಕಾ॥ ಅಶ್ವತ್ಥನಾರಾಯಣ, ಕಾ॥ ಎಂ.ನಾರಾಯಣಸ್ವಾಮಿ, ಕಾ॥ ಕಂದಸ್ವಾಮಿ ಹಾಗೂ ಕಾ॥ ಮುನಿರೆಡ್ಡಿಯವರು ಸದಸ್ಯರಾಗಿದ್ದ ಅಧ್ಯಕ್ಷ ಮಂಡಲಿ ಸಮಾವೇಶದ ಕಲಾಪಗಳನ್ನು ನಡೆಸಿಕೊಟ್ಟಿತು.

ಅಧ್ಯಕ್ಷ ಮಂಡಳಿಯ ಪರವಾಗಿ ಮಾತನಾಡುತ್ತಾ ಕಾ॥ ಸೂರಿಯವರು ಬಿ.ಹೆಚ್.ಇ.ಎಲ್. ಹಾಗೂ ಬಿ.ಇ.ಎಲ್. ನಂತಹ ದೊಡ್ಡ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ಪ್ರಯತ್ನ ನಡೆದಿರುವತ್ತ ಪ್ರತಿನಿಧಿಗಳ ಗಮನ ಸೆಳೆದರು. ಬಹುರಾಷ್ಟ್ರೀಯ ಕಂಪನಿಗಳಿಗೆ ವಿಶ್ವಬ್ಯಾಂಕ್‌ನ ಸಲಹೆಯ ಪ್ರಕಾರ ಕೇಂದ್ರ ಸರ್ಕಾರ ಆರ್ಡರುಗಳನ್ನು ಬದಲಿಸಿ ಬಿ.ಹೆಚ್.ಇ.ಎಲ್.ನ್ನು ರೋಗಗ್ರಸ್ತಗೊಳಿಸುತ್ತಿದೆ ಎಂದು ಅವರು ವಿವರಿಸಿದರು. ಬಿ.ಪಿ.ಇ. ವೇತನ ಪರಿಷ್ಕರಣದಲ್ಲಿ ಮೂಗು ತೂರಿ ಅದನ್ನು ಹಿಂದಕ್ಕೆಳೆಯುತ್ತಿರುವುದನ್ನು ಕಾ॥ ಸೂರಿ ಖಂಡಿಸಿದರು.

ಪೂರ್ಣ ತುಟ್ಟಿಭತ್ಯೆ

ಬೆಲೆಏರಿಕೆಯನ್ನು ನೂರಕ್ಕೆ ನೂರರಷ್ಟು ಸರಿದೂಗಿಸುವ ಪರಿಕಲ್ಪನೆಯನ್ನು ಈಗಾಗಲೇ ನಾಲ್ಕನೇ ವೇತನ ಆಯೋಗ, ಮಿಶ್ರಾ ಸಮಿತಿ ಒಪ್ಪಿಕೊಂಡಿದ್ದು ಎಲ್ಲರಿಗೂ ಇದನ್ನು ಜ್ಯಾರಿಗೊಳಿಸಲೇಬೇಕೆಂದು, ಕನಿಷ್ಠ ತುಟ್ಟಿಭತ್ಯೆ ಪಾಯಿಂಟಿಗೆ ರೂ.2.50 ಇರಬೇಕೆಂದು ಸಮಾವೇಶ ಒತ್ತಾಯಿಸಿತು.

ಪೂರ್ವಾನ್ವಯದ ಒಪ್ಪಂದಗಳೇ ಬೇಕು

ಇದಲ್ಲದೆ ಇನ್ನೂ ಕೆಲವು ನಿರ್ಣಯಗಳನ್ನು ಸಮಾವೇಶ ಅಂಗೀಕರಿಸಿತು.



ಗ್ರಾಮೀಣ ಉತ್ತರ ಭಾರತದತ್ತ

[illegible] ಪುಟದಿಂದ

ನೆರೆಸಲು ಕಮ್ಯೂನಿಸ್ಟ್ ಪಕ್ಷಗಳ ಕಾರ್ಯವಿಧಾನ ಹೀಗಿದೆ- ಈ ಜನ ವಿಭಾಗಗಳ ಸಮಸ್ಯೆಗೆ ಪರಿಹಾರಕ್ಕೆ ದೂರಗಾಮಿ ಬೇಡಿಕೆಗಳತ್ತ ಹೋರಾಟ, ಅದೇ ಸಮಯದಲ್ಲಿ ಈಗ ಈ ಜನ ವಿಭಾಗಗಳ ನಾಯಕತ್ವ ವಹಿಸುವ ರಾಜಕೀಯ ಶಕ್ತಿಗಳ ಜತೆ ಮೈತ್ರಿ ಹರಿಜನ ಮತ್ತಿತರ ಗ್ರಾಮೀಣ ಬಡವರ ಸಂಘಟನೆಗಳ ಜತೆ ಜಂಟಿ ಹೋರಾಟಗಳಿಗೆ 13ನೇ ಸಿ.ಪಿ.ಐ(ಎಂ) ಕಾಂಗ್ರೆಸ್ ನಿರ್ಣಯದಲ್ಲಿ ಕರೆಕೊಡಲಾಗಿದೆ. ಇದರ ಜತೆ ಎರಡೂ ಕಮ್ಯುನಿಸ್ಟ್ ಪಕ್ಷಗಳು ಹಿಂದೀ ಪ್ರದೇಶಗಳಲ್ಲಿ ತಮ್ಮ ಸಂಘಟನಾ ದೌರ್ಬಲ್ಯವನ್ನು ನೀಗಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿವೆ. ಸಿ.ಪಿ.ಐ(ಎಂ) ಸ್ವಲ್ಪ ಮಟ್ಟಿಗೆ ಸಫಲವಾಗಿದೆ ಎನ್ನಬಹುದು.

ಎರಡು ಕಮ್ಯುನಿಸ್ಟ್ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಕಡಿಮೆಯಾಗಿರುವುದು, ಐಕ್ಯಕಾರ್ಯಾಚರಣೆ-ಒಟ್ಟಾರೆಯಾಗಿ ಹಿಂದೀ ಪ್ರದೇಶಗಳತ್ತ ಎಡಪಕ್ಷಗಳ ಪ್ರಮಾಣವನ್ನು ಸ್ವಲ್ಪ ಮಟ್ಟಿಗೆ ಸುಗಮಗೊಳಿಸಬಹುದು.

ಉತ್ತರ ಭಾರತದ ಗ್ರಾಮೀಣ ದುಡಿಯುವ ಜನತೆಯ ಪಕ್ಷವಾಗಲು ಎಡಪಕ್ಷಗಳ ಪ್ರಯತ್ನದಲ್ಲಿ, ಮಧ್ಯಮ ಮಾರ್ಗದ ವಿರೋಧ ಪಕ್ಷಗಳ ಜೊತೆ ಜತೆ ಮೈತ್ರಿ, ಬಿ.ಜೆ.ಪಿಯನ್ನು ಪ್ರತ್ಯೇಕಿಸುವಿಕೆ ಪ್ರಮುಖ ಕಾರ್ಯತಂತ್ರಗಳು ಎನ್ನಬಹುದು.

ರಾಜ್ಯ ಸಮಿತಿ ಹೇಳಿಕೆ

1ನೇ ಪುಟದಿಂದ

ಅಪಾಯಕಾರಿ. ಜನತಾದಳ ಸರ್ಕಾರ ಇದರ ಕುರಿತು ಎಚ್ಚರ ವಹಿಸಬೇಕೆಂದು, ಪ್ರಜ್ಞಾವಂತ ಜನತೆ ಇಂಥ ಮತೀಯ, ಛಿದ್ರಕಾರಿ ಶಕ್ತಿಗಳನ್ನು ಪ್ರತ್ಯೇಕಿಸಿ ಅವರ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ರಾಜ್ಯ ಸಮಿತಿ ಕರೆ ಕೊಡುತ್ತದೆ.

ಘಟನೆ ಸ್ಥಳ ಪರಿಶೀಲನೆಗೆ ಪಕ್ಷದ ನಿಯೋಗ

ಚಿಂಚೋಳಿಯಲ್ಲಾದ ದಲಿತರ ಮೇಲಿನ ದಬ್ಬಾಳಿಕೆಯನ್ನು ಕುರಿತು ಅಭ್ಯಾಸ ಮಾಡಿ ರಾಜ್ಯ ಸಮಿತಿಗೆ ವರದಿ ಮಾಡಲು ರಾಜ್ಯ ಸೆಕ್ರೆಟಾರಿಯಟ್ ಸದಸ್ಯ ಕಾ॥ ಎನ್.ಕೆ.ಉಪಾಧ್ಯಾಯ, ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಕಾ॥ ಕಲ್ಲಪ್ಪ ಕಿರಣಗಿ ಹಾಗೂ ಪಕ್ಷದ ಗುಲ್ಬರ್ಗಾ ಜಿಲ್ಲಾ ಪರಿಷತ್ ಸದಸ್ಯ ಕಾ॥ ಮಾರುತಿ ಮಾನ್ಪಡೆಯವರನ್ನೊಳಗೊಂಡ ಮೂರು ಸದಸ್ಯರ ನಿಯೋಗ ತೆರಳಲಿದೆ.

ನಗರಸಭೆ ಪುರಸಭೆಗೆ ಚುನಾವಣೆ ನಡೆಸಿ

ರಾಜ್ಯದ ನಗರಸಭೆ ಪುರಸಭೆಗಳಿಗೆ ಹೋದ ವರ್ಷ ಆಗಸ್ಟ್ ತಿಂಗಳಲ್ಲೇ ಚುನಾವಣೆ ನಡೆಯಬೇಕಾಗಿದ್ದು, ವಾರ್ಡುಗಳ ಪುನರ್ವಿಂಗಡನೆಯ ನೆವದಲ್ಲಿ ಚುನಾವಣೆಗಳನ್ನು ಮುಂದೂಡಿ ಆಡಳಿತಾಧಿಕಾರಿಗಳನ್ನು ನೇಮಿಸಿರುವ ಜನತಾ ದಳದ ಸರ್ಕಾರದ ಕ್ರಮವನ್ನು ಸಿ.ಪಿ.ಐ.(ಎಂ) ಖಂಡಿಸುತ್ತದೆ. ಈ ಕ್ರಮ ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ, ಅಧಿಕಾರ ವಿಕೇಂದ್ರಿಕರಣಕ್ಕೆ ಧಕ್ಕೆ ಉಂಟು ಮಾಡುತ್ತದೆ ಜನತಾ ದಳ ಸರ್ಕಾರದ ಈ ಕ್ರಮ ಖಂಡನೀಯ. ನಗರಸಭೆ ಪುರಸಭೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ.

ಕೇಂದ್ರದ ಬೆಲೆ ಏರಿಕೆ ನೀತಿಯ ಖಂಡನೆ

ಪ್ರತಿವರ್ಷ ಲೋಕಸಭೆ ಸೇರುವ ಮುಂಚಿತವಾಗಿಯೇ ಕೇಂದ್ರ ಸರ್ಕಾರ ಕಬ್ಬಿಣ, ಅಕ್ಕಿ, ಸಕ್ಕರೆ, ಮುಂತಾದ ಅತ್ಯಾವಶ್ಯಕ ವಸ್ತುಗಳ ಬೆಲೆಗಳನ್ನು ಆಡಳಿತಾತ್ಮಕ ಕ್ರಮಗಳಿಂದ ಹೆಚ್ಚಿಸುತ್ತಾ ಬಂದು ಜನರ ಮೇಲೆ ಹೆಚ್ಚಿನ ಭಾರ ಹೇರಿಸುತ್ತಿದೆ. ಹಾಗೆಯೇ ಈ ಸಲ ಕೂಡ ಈಗಾಗಲೇ ಕಬ್ಬಿಣ, ಸಕ್ಕರೆ ಮಾತ್ರವಲ್ಲ ಈಗ ಪಡಿತರ ಅಂಗಡಿಗಳಲ್ಲಿ ಮಾರಾಟವಾಗುವ ಅಕ್ಕಿಯ ಬೆಲೆಯನ್ನು ಹೆಚ್ಚಿಸಿ ನಾಗರೀಕರಿಗೆ ಅನ್ಯಾಯವೆಸಗಿದೆ. ಕೇಂದ್ರ ಸರ್ಕಾರದ ಈ ನೀತಿಯ ವಿರುದ್ಧ ವಿಶಾಲ ತಳಹದಿಯ ಸಂಯುಕ್ತ ಚಳುವಳಿ ನಡೆಸಬೇಕೆಂದು ಕರೆ ಕೊಡುತ್ತದೆ.

ಸಂತ್ರಸ್ತರ ನೆರವಿಗೆ ಕರೆ

ಸೋವಿಯತ್ ಒಕ್ಕೂಟದ ಕಜಾಕಿಸ್ತಾನ್‌ನಲ್ಲಿ ಭೂಕಂಪ ನಡೆದು ಸಾವಿರಾರು ಜನರು ಮೃತಪಟ್ಟು ಕೆಲವು ಗ್ರಾಮಗಳೇ ನಾಶವಾಗಿ ಅಪಾರ ಹಾನಿಯಾಗಿದೆ. ಆ ಭೂಕಂಪದಲ್ಲಿ ಮೃತಪಟ್ಟವರಿಗೆ ಸಂತಾಪವನ್ನು ವ್ಯಕ್ತಮಾಡಿ ಆಸ್ತಿ-ಪಾಸ್ತಿ ಕಳೆದುಕೊಂಡವರಿಗೆ ದುಃಖ ವ್ಯಕ್ತಮಾಡುತ್ತದೆ. ಇವರ ಪರಿಹಾರಕ್ಕೆ ಸಾರ್ವಜನಿಕರು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತದೆ.

(ರಾಜಕೀಯ ನಿರ್ಣಯ ಮುಂದಿನ ವಾರ ಪ್ರಕಟಿಸಲಾಗುವುದು)

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053 . Managing Editor: N.K.Upadhyaya Managenial Office: Shobha Lodge Complex, 5th Main Road, Gandhinagar Bangalore-560 009.